ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 271 RNI Number: KNKAN/25/A2770 14-10-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ:01 ಸಂಚಿಕೆ:271 ರಾಯಚೂರು 14-10-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ಶಾಲಾ ಸಮಯದಲ್ಲಿ ಭಾರಿ ವಾಹನಗಳ ಸಂಚಾರ ನಿಷೇಧಿಸಿ!

ಐದು ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ನಿಯಂತ್ರಣಕ್ಕೆ ಆಗ್ರಹ; ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ರಾಯಚೂರು: ನಗರದ ಪ್ರಮುಖ ರಸ್ತೆಗಳಲ್ಲಿ ಶಾಲಾ-ಕಾಲೇಜುಗಳ ಆರಂಭ ಮತ್ತು ಮುಕ್ತಾಯದ ಸಮಯದಲ್ಲಿ ಭಾರಿ ವಾಹನಗಳ ಸಂಚಾರವನ್ನು ಸಂಪೂರ್ಣ ನಿಷೇಧಿಸಿ, ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸಂಘಟನೆಯ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ನಗರದಲ್ಲಿ ಭಾರಿ ವಾಹನಗಳ ಅತಿವೇಗದ ಸಂಚಾರ ಹಾಗೂ ಮರಳು, ಎಂ.ಸ್ಯಾಂಡ್, ಬೂದಿ ಮತ್ತಿತರ ಸಾಮಗ್ರಿಗಳನ್ನು ಸಾಗಿಸುವ ವಾಹನಗಳಿಂದ ಉಂಟಾಗುವ ಧೂಳು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಸುರಕ್ಷತೆಗೆ ಅಪಾಯ ತಂದೊಡ್ಡುತ್ತಿದೆ. ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು ಕಾಲ್ನಡಿಗೆ, ಸೈಕಲ್ ಹಾಗೂ ದ್ವಿಚಕ್ರ ವಾಹನಗಳಲ್ಲಿ ಶಾಲಾ-ಕಾಲೇಜುಗಳಿಗೆ ತೆರಳುತ್ತಾರೆ. ಇಂತಹ ಸಂದರ್ಭದಲ್ಲಿ ಭಾರಿ ವಾಹನಗಳ ಸಂಚಾರದಿಂದ ಅಪಘಾತಗಳ ಭೀತಿ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಐದು ಪ್ರಮುಖ ರಸ್ತೆಗಳಲ್ಲಿ ಅಪಾಯದ ಆತಂಕ



ಆರ್‌ಟಿಒ ವೃತ್ತದಿಂದ ಸ್ಟೇಷನ್ ರಸ್ತೆ, ಗೋಶಾಲಾ ರಸ್ತೆ ವ'ುಾಲಕ' ಗ'ಂಜ್ ವೃತ್ತದವರೆಗೆ; ರ'ೈಲ'್ವ ನಿಲ್ದಾಣದ' ಗುಡ್ಸ್‌ಶೆಡ್‌ನಿಂದ ಗ'ಂಜ್ ವೇರ್‌ಹೌಸ್‌ಗೆ ಸರಕು ಸಾಗಿಸುವ ಮಾರ್ಗ; ಲಿಂಗಸೂಗೂರು ಬೈಪಾಸ್‌ನಿಂದ ಬಸವೇಶ್ವರ ವೃತ್ತ, ಚಂದ್ರಮೌಳೇಶ್ವರ ವೃತ್ತ ಮೂಲಕ ಎಲ್‌ಬಿಎಸ್ ನಗರ ಕ್ರಾಸ್‌ವರೆಗೆ; ಬಸನಬಾವಿ ವೃತ್ತದಿಂದ ಗದ್ವಾಲ್ ರಸ್ತೆ ಹಾಗೂ ಎಲ್‌ವಿಡಿ ಕಾಲೇಜು ರಸ್ತೆಯಿಂದ ಜವಾಹರನಗರ ಮೂಲಕ ಬೋಳಮಾನ ದೊಡ್ಡಿ ರಸ್ತೆಯಲ್ಲಿ ವಾಹನ ಸಂಚಾರ ನಿಯಂತ್ರಿಸುವುದು ತುರ್ತು ಅಗತ್ಯವಾಗಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಸಮಯ ನಿಗದಿಪಡಿಸಿ ವಾಹನ ಸಂಚಾರಕ್ಕೆ ನಿರ್ಬಂಧ

ಶಾಲಾ-ಕಾಲೇಜುಗಳ ಆರಂಭದ ಸಮಯವಾದ ಬೆಳಿಗ್ಗೆ 8ರಿಂದ 10.30ರವರೆಗೆ ಹಾಗೂ ಸಂಜೆ 4ರಿಂದ 5.30ರವರೆಗೆ ಈ ರಸ್ತೆಗಳಲ್ಲಿ ಭಾರಿ ವಾಹನಗಳ ಸಂಚಾರವನ್ನು ನಿಷೇಧಿಸಿ ಆದೇಶ ಹೊರಡಿಸಬೇಕು. ಮರಳು, ಎಂ.ಸ್ಯಾಂಡ್ ಮತ್ತು ಬೂದಿ ಸಾಗಿಸುವ ವಾಹನಗಳು ಕಡ್ಡಾಯವಾಗಿ ಟಾರ್ಪಾಲಿನ್ ಮುಚ್ಚಿಕೊಂಡು ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು. ನಿಯಮ ಉಲ್ಲಂಘಿಸುವ ವಾಹನಗಳಿಗೆ ದಂಡ ವಿಧಿಸಿ, ಅಗತ್ಯವಿದ್ದಲ್ಲಿ ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ರಸ್ತೆಗಳಲ್ಲಿ ಬಿದ್ದಿರುವ ಮರಳು, ಎಂ.ಸ್ಯಾಂಡ್ ಹಾಗೂ ಇತರ ನಿರ್ಮಾಣ ಸಾಮಗ್ರಿಗಳನ್ನು ತೆರವುಗೊಳಿಸಲು ಮಹಾನಗರ ಪಾಲಿಕೆ ಮತ್ತು ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚನೆ

ಮೂರನೇಯ ಪುಟಕ್ಕೆ

ಅಪಘಾತ ಸಂತ್ರಸ್ತನಿಗೆ ಪರಿಹಾರ ಪಾವತಿಸಲು ವಿಳಂಬ: ಕೆಕೆಆರ್‌ಟಿಸಿ ಬಸ್ ಜಪ್ತಿ

ಲಿಂಗಸುಗೂರು: ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಗೆ ನ್ಯಾಯಾಲಯ ಆದೇಶಿಸಿದ ಪರಿಹಾರವನ್ನು ಪಾವತಿಸದ ಹಿನ್ನೆಲೆಯಲ್ಲಿ, ನ್ಯಾಯಾಲಯದ ಆದೇಶದ ಮೇರೆಗೆ ಕೆಕೆಆರ್‌ಟಿಸಿ ಬಸ್‌ನ್ನು ಜಪ್ತಿ ಮಾಡಲಾಗಿದೆ.



ಚಿಕ್ಕಹಣಗಿ ಗ್ರಾಮದ ಬಸವರಾಜ ಶೆಟ್ಟಿ ಅವರ ಪುತ್ರ ವಿನೋದ್ ಅವರು ಹಿರೇಹಣಗಿ ಗ್ರಾಮದ ಪೆಟ್ರೋಲ್ ಬಂಕ್ ಬಳಿ ದ್ವಿಚಕ್ರ ವಾಹನ ನಿಲ್ಲಿಸಿಕೊಂಡು ನಿಂತಿದ್ದಾಗ, ಕೆಎ-36 ಎಫ್ 1377 ನೋಂದಣಿ ಸಂಖ್ಯೆಯ ಕೆಕೆಆರ್‌ಟಿಸಿ ಬಸ್ ಅತಿವೇಗ ಹಾಗೂ ನಿರ್ಲಕ್ಷ್ಯದಿಂದ ಬಂದು ಡಿಕ್ಕಿ ಹೊಡೆದಿತ್ತು. ಪರಿಣಾಮ ವಿನೋದ್ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಮೊದಲು ರಾಯಚೂರಿನ ಬಾಲಂಕು ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ್‌ಗೆ ಕರೆದೊಯ್ಯಲಾಗಿತ್ತು.

ಈ ಅಪಘಾತಕ್ಕೆ ಸಂಬಂಧಿಸಿದಂತೆ ವಿನೋದ್ ಅವರು ಎಂವಿಸಿ 296/2023ರ ಅಡಿಯಲ್ಲಿ ಕೆಕೆಆರ್‌ಟಿಸಿ ರಾಯಚೂರು ವಿಭಾಗದ ವಿಭಾಗೀಯ ಸಂಚಾರ ನಿಯಂತ್ರಕರ ವಿರುದ್ಧ ಪರಿಹಾರ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು 2024ರ ಏಪ್ರಿಲ್ 5ರಂದು ಪರಿಹಾರ ಪಾವತಿಸುವಂತೆ ಆದೇಶಿಸಿತ್ತು. ಆದರೆ, ಪರಿಹಾರ ಪಾವತಿಯಾಗದ ಹಿನ್ನೆಲೆಯಲ್ಲಿ ಅರ್ಜಿದಾರರು ತೊಂದರೆ ಅನುಭವಿಸುವಂತಾಗಿತ್ತು.

ಈ ಹಿನ್ನೆಲೆಯಲ್ಲಿ 2026ರ ಜನವರಿ 13ರಂದು ನ್ಯಾಯಾಲಯವು ಬಸ್ ಜಪ್ತಿ ಮಾಡಲು ಆದೇಶಿಸಿತ್ತು. ಅದರಂತೆ ನ್ಯಾಯಾಲಯದ

3ನೇಯ ಪುಟಕ್ಕೆ

ಓಪೆಕ್ ಆಸ್ಪತ್ರೆಯಲ್ಲಿ ನಿರ್ಲಕ್ಷ್ಯದ ಆರೋಪ: ಗಾಯದ ಡ್ರೆಸ್ಸಿಂಗ್ ವೇಳೆ ಹುಳುಗಳು ಪತ್ತೆ!

ರಾಯಚೂರು: ಅಪಘಾತದಲ್ಲಿ ಗಾಯಗೊಂಡು ನಗರದ ಹೈದರಾಬಾದ್ ರಸ್ತೆಯಲ್ಲಿರುವ ಓಪೆಕ್ ಆಸ್ಪತ್ರೆಗೆ ದಾಖಲಾಗಿರುವ ಯಾದಗಿರಿ ಮೂಲದ ಮಹೇಶ್ವರಿ ಎಂಬ ಮಹಿಳೆಗೆ ಸಮರ್ಪಕ ಚಿಕಿತ್ಸೆ ನೀಡುತ್ತಿಲ್ಲ ಎಂಬ ಗಂಭೀರ ಆರೋಪ ಕೇಳಿಬಂದಿದೆ.



ಕಳೆದ ಮೂರು ದಿನಗಳಿಂದ ಗಾಯಕ್ಕೆ ಸರಿಯಾಗಿ ಡ್ರೆಸ್ಸಿಂಗ್ ಮಾಡಿಲ್ಲ. ಮಂಗಳವಾರ ಡ್ರೆಸ್ಸಿಂಗ್ ಮಾಡಲು ಬ್ಯಾಂಡೇಜ್ ಬಿಚ್ಚಿದಾಗ ಗಾಯದಲ್ಲಿ ಹುಳುಗಳು ಪತ್ತೆಯಾಗಿವೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಯಾದಗಿರಿ ಸಮೀಪ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡಿದ್ದ ಮಹೇಶ್ವರಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರಿನ ಓಪೆಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ ಮೂರು ದಿನಗಳಿಂದ ಗಾಯಕ್ಕೆ ಸಮರ್ಪಕವಾಗಿ ಡ್ರೆಸ್ಸಿಂಗ್ ಮಾಡಿಲ್ಲ ಹಾಗೂ ಅಗತ್ಯ ಆರೈಕೆ ಒದಗಿಸಿಲ್ಲ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಮಂಗಳವಾರ ಗಾಯಕ್ಕೆ ಡ್ರೆಸ್ಸಿಂಗ್ ಮಾಡಲು ಬ್ಯಾಂಡೇಜ್ ಬಿಚ್ಚಿದ ಸಂದರ್ಭದಲ್ಲಿ ಹುಳುಗಳು ಪತ್ತೆಯಾಗಿವೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಚಿಕಿತ್ಸಾ ನಿರ್ಲಕ್ಷ್ಯದ ಆರೋಪ :

ಅಪಘಾತದಲ್ಲಿ ಗಾಯಗೊಂಡ ರೋಗಿಗಳಿಗೆ ನಿರಂತರ ಚಿಕಿತ್ಸೆ, ಗಾಯದ ಸ್ಥಿತಿಯ ಪರಿಶೀಲನೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಡ್ರೆಸ್ಸಿಂಗ್ ಮಾಡುವುದು ಅತ್ಯಗತ್ಯ. ಇಂತಹ ಸಂದರ್ಭದಲ್ಲಿ ಮೂರು ದಿನಗಳಿಂದ ಗಾಯಕ್ಕೆ ಡ್ರೆಸ್ಸಿಂಗ್ ಮಾಡಿಲ್ಲ ಹೀಗಾಗಿಯೇ ಹುಳುಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮಹಿಳೆಗೆ ತಕ್ಷಣ ಸೂಕ್ತ ಚಿಕಿತ್ಸೆ ಒದಗಿಸಬೇಕು ಎಂದು ಕುಟುಂಬಸ್ಥರು ಒತ್ತಾಯಿಸಿದ್ದಾರೆ. ಅಲ್ಲದೆ, ಚಿಕಿತ್ಸೆಯಲ್ಲಿ ನಿರ್ಲಕ್ಷ್ಯ ವಹಿಸಿದ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ದೇವದುರ್ಗ ತಾಲ್ಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ

ಗ್ರಾಮೀಣ ಭಾಗದಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು; ಯುವ ನಾಯಕರಿಗೆ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಪದಾಧಿಕಾರಿಗಳ ಅಭಿಮತ

ದೇವದುರ್ಗ: ದೇವದುರ್ಗ ತಾಲ್ಲೂಕಿನ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆಯ ಕುರಿತು ದೇವದುರ್ಗದ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಒಕ್ಕೂಟದ ನೂತನ ಪದಾಧಿಕಾರಿಗಳ ವಿವರಗಳನ್ನು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಲಾಯಿತು.

ಇದಕ್ಕೂ ಮೊದಲು ಹೂವಿನ ಹೆಡಗಿಯ ನ್ಯಾಷನಲ್ ಸ್ಕೂಲ್‌ನಲ್ಲಿ ಭಾನುವಾರ ನಡೆದ ಒಕ್ಕೂಟದ ಸಭೆಯಲ್ಲಿ ಹಾಜರಿದ್ದ ಸಂಸ್ಥಾಪಕ ಸದಸ್ಯರ ಒಪ್ಪಿಗೆಯ ಮೇರೆಗೆ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿತ್ತು.

ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳ ಕೊಡುಗೆ ಮಹತ್ವದ್ದು: ಒಕ್ಕೂಟದ ಅಧ್ಯಕ್ಷ ಮಾರೆಪ್ಪ ಕೊತ್ತದೊಡ್ಡಿ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳು ಗ್ರಾಮೀಣ ಭಾಗದಲ್ಲಿಯೂ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಹಲವು ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿವೆ.



ಶಿಕ್ಷಕರನ್ನು ಗೌರವಿಸುವುದು, ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಸೇರಿದಂತೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸಂಸ್ಥೆಗಳು ಶ್ರಮಿಸುತ್ತಿವೆ ಎಂದು ತಿಳಿಸಿದರು.

ಯುವ ನಾಯಕರಿಗೆ ಆದ್ಯತೆ: ಒಕ್ಕೂಟದ ಗೌರವಾಧ್ಯಕ್ಷ ತಿರುಪತಿ ಸೂಗೂರು ಮಾತನಾಡಿ, ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಹಿರಿಯರ ಅನುಭವದ ಜೊತೆಗೆ ಯುವ ನಾಯಕರಿಗೂ ಹಾಗೂ ಯುವ ಪ್ರತಿಭೆಗಳಿಗೂ ಆದ್ಯತೆ ನೀಡಿ ಜವಾಬ್ದಾರಿಗಳನ್ನು ವಹಿಸಲಾಗಿದೆ. ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಸಂಘಟನೆಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಡೆಸುವುದು ಮುಖ್ಯವಾಗಿದೆ ಎಂದರು.

ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ: ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ದೇಸಾಯಿ ಮಾತನಾಡಿ, ಖಾಸಗಿ ಶಾಲೆಗಳ ಕುರಿತು ಸಾರ್ವಜನಿಕರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ

3ನೇಯ ಪುಟಕ್ಕೆ

ಮೀಸಲಾತಿ ಹೆಚ್ಚಳ ವಿಚಾರ; ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ: ಛಲವಾದಿ ನಾರಾಯಣ ಸ್ವಾಮಿ

ರಾಯಚೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳದ ತೀರ್ಮಾನವನ್ನು ಕರ್ನಾಟಕ ಹೈಕೋರ್ಟ್ ತಿರಸ್ಕರಿಸಿದ್ದು ಈ ವಿಚಾರದಲ್ಲಿ



ರಾಜ್ಯ ಕಾಂಗ್ರೆಸ್ ಸರ್ಕಾರ ವಾದ ಮಂಡಿಸಲು, ನ್ಯಾಯಾಲಯಕ್ಕೆ ಮನವರಿಕೆ ಮಾಡಲು ವಿಫಲವಾಗಿದ್ದು ಉದ್ದೇಶ ಪೂರ್ವಕವಾಗಿ ದಲಿತ ವಿರೋಧಿ ನೀತಿ ಅನುಸರಿಸಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದ್ದಾರೆ.

ಮಂಗಳವಾರ ರಾಯಚೂರಿನಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಕ್ರಮವಾಗಿ ಶೇ 15ರಿಂದ ಶೇ 17 ಹಾಗೂ ಶೇ 3ರಿಂದ 7ಕ್ಕೆ ಹೆಚ್ಚಿಸಲು ತೀರ್ಮಾನಿಸಿದ್ದರು. ಆದರೆ ಇದನ್ನು ವಿರೋಧಿಸಿ ಕೋರ್ಟ್ ನಲ್ಲಿ ದಾವೆ ಹೂಡಿದಾಗ ರಾಜ್ಯ ಸರ್ಕಾರ ಸರಿಯಾಗಿ ಮನವರಿಕೆ ಮಾಡಿಲ್ಲ. ಹೈಕೋರ್ಟ್ ಮೀಸಲಾತಿ ಶೇ. 50 ದಾಟಬಾರದು ಎಂಬ ತೀರ್ಪಿನ ಆಧಾರದ ಮೇಲೆ ಅರ್ಜಿ ತಿರಸ್ಕಾರವಾಗಿದೆ. ನಾವು ಹೈಕೋರ್ಟ್ ಆದೇಶಕ್ಕೆ ಪ್ರಶ್ನೆಮಾಡಲ್ಲ. ಆದರೆ ರಾಜ್ಯ ಸರ್ಕಾರ ಸರಿಯಾಗಿ ವಾದ ಮಾಡಿಲ್ಲ, ಇದು ದಲಿತ ವಿರೋಧಿ ನೀತಿಯಾಗಿದೆ. ಈಗ ಸುಪ್ರೀಂಕೋರ್ಟ್ ಕೋರ್ಟ್ ಗೆ ಮೇಲ್ಮನವಿ ಸಲ್ಲಿಸಿ ಬದ್ಧತೆ ಪ್ರದರ್ಶಿಸಬೇಕು. ಇಲ್ಲದಿದ್ದರೆ ಬಿಜೆಪಿ ಪಕ್ಷದಿಂದ ಮೇಲ್ಮನವಿ ಅರ್ಜಿ ಸಲ್ಲಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಮೀಸಲಾತಿಯಿಂದ ದೇಶ ನಾಶವಾಗುತ್ತೆ. ಅಭಿವೃದ್ಧಿ ಆಗಲ್ಲ ಅಂತ 1950 ರಲ್ಲಿಯೇ ಜವಾಹರಲಾಲ್ ನೆಹರು ಅವರು ಎಲ್ಲಾ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು. ಸ್ವಾತಂತ್ರ್ಯ ಪೂರ್ವ ಭಾರತದಿಂದಲೂ ಮೀಸಲಾತಿ

3ನೇಯ ಪುಟಕ್ಕೆ

15ರಂದು ದೇವದುರ್ಗ ರಕ್ತನಿಧಿ ಕೇಂದ್ರ ಉದ್ಘಾಟನೆ

ದೇವದುರ್ಗ: ರಕ್ತದ ಕೊರತೆಯಿಂದ ಯಾವುದೇ ಜೀವ ಅಪಾಯಕ್ಕೆ ಸಿಲುಕಬಾರದು, ತುರ್ತು ಸಂದರ್ಭದಲ್ಲಿ ಅಗತ್ಯವಿರುವವರಿಗೆ ಸಕಾಲದಲ್ಲಿ ರಕ್ತ ದೊರೆಯಬೇಕು ಎಂಬ ಮಹತ್ತರ ಆಶಯದೊಂದಿಗೆ ದೇವದುರ್ಗ ಪಟ್ಟಣದಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ದೇವದುರ್ಗ ರಕ್ತನಿಧಿ ಕೇಂದ್ರ ಅಕ್ಟೋಬರ್ 15ರಂದು ಗುರುವಾರ ಶುಭಾರಂಭಗೊಳ್ಳಲಿದೆ.



ಆರೋಗ್ಯ ಸೇವೆಗಳ ವಿಸ್ತರಣೆ ಹಾಗೂ ರಕ್ತದಾನದ ಮಹತ್ವದ ಕುರಿತು ಜನಜಾಗೃತಿ ಮೂಡಿಸುವ ಉದ್ದೇಶದಿಂದ ರಕ್ತನಿಧಿ ಕೇಂದ್ರದ ಆರಂಭೋತ್ಸವದ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನೂ ಆಯೋಜಿಸಲಾಗಿದೆ.

ಪಟ್ಟಣದ ಜಾಲಹಳ್ಳಿ ರಸ್ತೆಯ ಬಸವ ಸಂಕೀರ್ಣದಲ್ಲಿರುವ ದೇವದುರ್ಗ ರಕ್ತನಿಧಿ ಕೇಂದ್ರದ ಆವರಣದಲ್ಲಿ ಅಂದು ಬೆಳಿಗ್ಗೆ 10.20ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಪೂಜ್ಯರ ಪಾವನ ಸಾನಿಧ್ಯದಲ್ಲಿ ವೈದ್ಯಕೀಯ ಕ್ಷೇತ್ರದ ಗಣ್ಯರು ಹಾಗೂ ತಜ್ಞರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನೆರವೇರಲಿದೆ.

ರಕ್ತದಾನವು ಕೇವಲ ದಾನವಲ್ಲ, ಸಂಕಷ್ಟದಲ್ಲಿರುವ ಮತ್ತೊಂದು ಜೀವಕ್ಕೆ ಬದುಕಿನ ಭರವಸೆ ನೀಡುವ ಮಾನವೀಯ ಸೇವೆಯಾಗಿದೆ. ಅಪಘಾತ, ಶಸ್ತ್ರಚಿಕಿತ್ಸೆ, ಹೆರಿಗೆ ಸೇರಿದಂತೆ ವಿವಿಧ ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಮಹತ್ವದ್ದಾಗಿದೆ. ಇಂತಹ ಸಂದರ್ಭದಲ್ಲಿ ರಕ್ತದ ಕೊರತೆಯಿಂದ ಯಾರೂ ತೊಂದರೆ ಅನುಭವಿಸಬಾರದು ಎಂಬ ಆಶಯದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ.

ನಿಮ್ಮ ಒಂದು ಹನಿ ರಕ್ತ, ಮತ್ತೊಂದು ಜೀವಕ್ಕೆ ಬದುಕಿನ ಬೆಳಕು ಎಂಬ ಮಾನವೀಯ ಸಂದೇಶದೊಂದಿಗೆ ಆರೋಗ್ಯವಂತ ಸಾರ್ವಜನಿಕರು ಶಿಬಿರದಲ್ಲಿ ಉತ್ಸಾಹದಿಂದ ಪಾಲ್ಗೊಂಡು ರಕ್ತದಾನ ಮಾಡುವ ಮೂಲಕ ಜೀವ ಉಳಿಸುವ ಪುಣ್ಯಕಾರ್ಯಕ್ಕೆ ಕೈಜೋಡಿಸಬೇಕು ಎಂದು ಆಯೋಜಕರು ಮನವಿ ಮಾಡಿದ್ದಾರೆ.

ದೇವದುರ್ಗ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು, ಯುವಕರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ರಕ್ತದಾನದಲ್ಲಿ ಆಸಕ್ತಿ ಹೊಂದಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ದೇವದುರ್ಗ ರಕ್ತನಿಧಿ ಕೇಂದ್ರದ ಆರಂಭೋತ್ಸವ ಹಾಗೂ ರಕ್ತದಾನ ಶಿಬಿರದ ಕುರಿತು ಹೆಚ್ಚಿನ ಮಾಹಿತಿಗಾಗಿ 08531-265666, 99643 94151 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು.

ತಾರಕಕ್ಕೇರಿದ ಸ್ಟಿಂಗ್ ಆಪರೇಷನ್ ವಿವಾದ : ಸಿಬಿಐ ತನಿಖೆಗೆ ಹೆಚ್ಡಿಕೆ ಆಗ್ರಹ

ಬೆಂಗಳೂರು,ಅ.13- ಕರ್ನಾಟಕದಲ್ಲಿ ಸ್ಟಿಂಗ್ ಆಪರೇಷನ್ ಆರೋಪದ ಸುತ್ತ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ರಾಜ್ಯದ ರಾಜಕೀಯ ಸಂಸ್ಕೃತಿಯನ್ನು ಕಲುಷಿತಗೊಳಿಸುತ್ತಿವೆ ಎಂದು ಆರೋಪಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಪ್ರಕರಣದ ಕುರಿತು ಪಾರದರ್ಶಕ ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗಪಡಿಸಬೇಕು. ಇದಕ್ಕಾಗಿ ಪ್ರಕರಣವನ್ನು ಕೇಂದ್ರ ತನಿಖಾ ದಳಕ್ಕೆ (ಸಿಬಿಐ) ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ, ಕಬ್ಬಿನ ಬೆಲೆ, ರೈತರ ಸಮಸ್ಯೆಗಳು, ಬಿಡದಿ ಟೌನ್‌ಶಿಪ್ ಮತ್ತು ನೈಸ್ ಯೋಜನೆ ಸೇರಿದಂತೆ ಹಲವು ಪ್ರಮುಖ ವಿಚಾರಗಳಿದ್ದರೂ, ಅವುಗಳನ್ನೆಲ್ಲ ಹಿಂದಿಕ್ಕಿ ಸ್ಟಿಂಗ್ ಆಪರೇಷನ್ ವಿವಾದವೇ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಗಿದೆ ಎಂದು ಟೀಕಿಸಿದರು.ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಂಬಂಧಿಸಿದ ಸ್ಟಿಂಗ್ ಆಪರೇಷನ್ ವಿಚಾರವನ್ನು ಪ್ರಸ್ತಾಪಿಸಿದ ಕುಮಾರಸ್ವಾಮಿ, ಈ ಕಾರ್ಯಾಚರಣೆಯ ಹಿಂದೆ ಯಾರಿದ್ದಾರೆ, ಅದನ್ನು ಯಾರು ನಡೆಸಿದ್ದಾರೆ ಮತ್ತು ಅದರ ಉದ್ದೇಶವೇನು ಎಂಬುದನ್ನು ತನಿಖೆಯಿಂದ ಪತ್ತೆಹಚ್ಚಬೇಕು.ಸ್ಟಿಂಗ್ ಆಪರೇಷನ್ ನಡೆಸಿದ ವ್ಯಕ್ತಿ ಯಾರು ಎಂಬುದು ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಹೊರಬರಬೇಕು. ಈ ವಿಚಾರದಲ್ಲಿ ತಮಗೆ ನೇರ ಮಾಹಿತಿ ಇಲ್ಲದ ಕಾರಣ ತನಿಖೆಗೆ ಆಗ್ರಹಿಸುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ನನ್ನ ಬಳಿ ಪೊಲೀಸ್ ವ್ಯವಸ್ಥೆ ಇಲ್ಲ. ಸ್ಟಿಂಗ್ ಆಪರೇಷನ್ ಯಾರು ಮಾಡಿಸಿದ್ದಾರೆ ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಸಿ ಎಂದು ಹೇಳುತ್ತಿದ್ದೇನೆ. ಮುಖ್ಯಮಂತ್ರಿಯವರು ತಾವು ಸರಿಯಾದ ಕೆಲಸ ಮಾಡುತ್ತಿದ್ದೇವೆ ಎಂದು ಭಾವಿಸಿದ್ದರೆ ತನಿಖೆಗೆ ಅವಕಾಶ ನೀಡಲಿ. ಎ ಲ ್ಲ ವ ' ೂ ಹೊರಬರಲಿ.ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ತಾವು ಯಾರಿಗೂ ಗೂಢಚರ್ಯೆ ನಡೆಸುವಂತೆ ಸೂಚಿಸಿರಲಿಲ್ಲ ಎಂದ ಅವರು, ಪ್ರಸ್ತುತ ಇಂತಹ ಚಟುವಟಿಕೆಗಳು ನಡೆಯುತ್ತಿವೆಯೇ ಎಂಬುದನ್ನು ಪರಿಶೀಲಿಸಬೇಕಿದೆ ಎಂದು ಹೇಳಿದರು.



ರಾಜ್ಯದ ಮುಖ್ಯಮಂತ್ರಿ ದೆಹಲಿಗೆ ತೆರಳಿ ಕೇಂದ್ರ ಸಚಿವರೊಂದಿಗೆ ರೈತರ ಸಮಸ್ಯೆಗಳ ಕುರಿತು ಚರ್ಚಿಸುತ್ತಿರುವ ಸಂದರ್ಭದಲ್ಲಿ, ರಾಜ್ಯದ ರಾಜಕೀಯ ವಾತಾವರಣದಲ್ಲಿ ಇಂತಹ ವಿವಾದಗಳು ಮುನ್ನೆಲೆಗೆ ಬಂದಿರುವುದು ದುರದೃಷ್ಟಕರ.ರಾಜ್ಯದಲ್ಲಿ ಕೆಟ್ಟ ರಾಜಕೀಯ ಸಂಸ್ಕೃತಿ ಬೆಳೆಯುತ್ತಿದೆ.ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಅತ್ಯಂತ ಕೆಟ್ಟ ರಾಜಕೀಯ ಸಂಸ್ಕೃತಿಗೆ ನಾಂದಿ ಹಾಡುತ್ತಿವೆ. ರಾಜ್ಯದ ರಾಜಕೀಯ ವಾತಾವರಣವನ್ನು ಸರಿಪಡಿಸಲು ಹಿರಿಯ ನಾಯಕರು ಧ್ವನಿ ಎತ್ತಬೇಕು ಎಂದು ಬೇಸರ ವ್ಯಕ್ತಪಡಿಸಿದರು.

ನಾನು ನೋವಿನಿಂದ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಮುಖ್ಯಮಂತ್ರಿಯವರ ಕುರ್ಚಿಯನ್ನು ಎಳೆದ ಘಟನೆ ಕುರಿತು ಮಾತನಾಡುವುದಿಲ್ಲ. ಆದರೆ ಇದೇ ರೀತಿ ಮುಂದುವರಿದರೆ, ಕುರ್ಚಿಯನ್ನೇ ಎಳೆದು ಹಾಕುವ ಕಾಲವೂ ದೂರವಿಲ್ಲ.ರಾಜ್ಯದಲ್ಲಿ ಅಧಿಕಾರ, ರಾಜಕೀಯ ಪ್ರಭಾವ ಮತ್ತು ಪರಸ್ಪರ ಆರೋಪ-ಪ್ರತ್ಯಾರೋಪಗಳ ಮೂಲಕ ನಾಯಕರನ್ನು ಗುರಿಯಾಗಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಇಂತಹ ಬೆಳವಣಿಗೆಗಳಿಗೆ ಅಂತ್ಯ ಹಾಡುವ ಅಗತ್ಯವಿದೆ ಎಂದು ಅವರು ಹೇಳಿದರು.

ಫೋನ್ ಕದ್ದಾಲಿಕೆ ಆರೋಪ:

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಗಂಭೀರ ಆರೋಪ ಮಾಡಿದ ಕುಮಾರಸ್ವಾಮಿ, ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ಸದಾಶಿವನಗರದಲ್ಲಿ ನಾಲ್ವರು ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ.ಸಚಿವ ಸಂಪುಟದ ಸಭೆಗಳಲ್ಲಿ ನಡೆಯುವ ಚರ್ಚೆಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂಬ ಮಾತು ಪೊಲೀಸ್ ಇಲಾಖೆಯ ವಲಯದಲ್ಲಿಯೂ ಕೇಳಿಬರುತ್ತಿದೆ ಎಂದು ಹೇಳಿದರು.

ತಮನ್ನೂ ಒಳಗೊಂಡಂತೆ ಹಲವರ ಫೋನ್‌ಗಳನ್ನು ಕದ್ದಾಲಿಸಲಾಗುತ್ತಿದೆ ಎಂಬ ಅನುಮಾನವನ್ನೂ ವ್ಯಕ್ತಪಡಿಸಿದ ಅವರು, ನನ್ನನ್ನೂ ಸೇರಿಸಿ ಎಲ್ಲರ ಫೋನ್‌ಗಳು ಟ್ಯಾಪ್ ಆಗುತ್ತಿವೆ ಎಂಬ ಅನುಮಾನವಿದೆ. ಫೋನ್ ಕದ್ದಾಲಿಕೆ ನಡೆಯುತ್ತಿದ್ದರೆ ಅದರ ಹಿಂದೆ ಯಾರು ಇದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಬೇಕು ಎಂದು ಆಗ್ರಹಿಸಿದರು.

ತಮ ಕುಟುಂಬದ ಸದಸ್ಯ ಹಾಗೂ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ ಪ್ರಕರಣವನ್ನು ಉಲ್ಲೇಖಿಸಿದ ಕುಮಾರಸ್ವಾಮಿ, 2024ರ ಲೋಕಸಭಾ ಚುನಾವಣೆಯ ಮತದಾನಕ್ಕೆ ಕೆಲವೇ ದಿನಗಳ ಮೊದಲು ಹಾಸನ ಮತ್ತು ಮಂಡ್ಯ ಭಾಗಗಳಲ್ಲಿ ಪೆನ್‌ಡ್ರೈವ್‌ಗಳ ಮೂಲಕ ವಿಡಿಯೋಗಳನ್ನು ಹಂಚಲಾಗಿದೆ. ಈ ಬೆಳವಣಿಗೆಯಿಂದ ಅನೇಕ ಮಹಿಳೆಯರ ಗೌಪ್ಯತೆಗೆ ಧಕ್ಕೆಯಾಗಿದೆ. ವಿಡಿಯೋಗಳನ್ನು ಹಂಚಿದವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಗೆ ಪ್ರಶಸ್ತಿ ನೀಡಿದ ವಿಚಾರವನ್ನೂ ಪ್ರಸ್ತಾಪಿಸಿದ ಅವರು, ವಿಡಿಯೋಗಳ ಪ್ರಸಾರ ಮತ್ತು

3ನೇಯ ಪುಟಕ್ಕೆ

ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಕಾನೂನುಗಳ ಪರಿಣಾಮಕಾರಿ ಅನುಷ್ಠಾನ ಅಗತ್ಯ : ಶ್ರೀನಿವಾಸ ನವಲೆ



ಕಲಬುರಗಿ: ಕಾರ್ಮಿಕರ ಹಕ್ಕುಗಳ ರಕ್ಷಣೆ, ಸಾಮಾಜಿಕ ಭದ್ರತೆ ಹಾಗೂ ಅವರಿಗೆ ನ್ಯಾಯಯುತ ಸೌಲಭ್ಯಗಳನ್ನು ಒದಗಿಸುವುದು ಕಾರ್ಮಿಕ ಕಾನೂನುಗಳ ಪ್ರಮುಖ ಉದ್ದೇಶವಾಗಿದೆ. ಹೊಸ ಕಾರ್ಮಿಕ ಸಂಹಿತೆಗಳು ಮತ್ತು ಕಾನೂನು ತಿದ್ದುಪಡಿಗಳ ಕುರಿತು ಅಧಿಕಾರಿಗಳು ಸಮಗ್ರ ಅರಿವು ಹೊಂದಿ, ಅವುಗಳ ಆಶಯಕ್ಕೆ ಅನುಗುಣವಾಗಿ ಅನುಷ್ಠಾನಗೊಳಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿಯ ಹೊಸ ಸಭಾಂಗಣದಲ್ಲಿ ಸೋಮವಾರ ಕಾರ್ಮಿಕ ಇಲಾಖೆಯ ಕಲಬುರಗಿ ಪ್ರಾದೇಶಿಕ ವ್ಯಾಪ್ತಿಯ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಕಾರ್ಮಿಕ ಇಲಾಖೆ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು ಮತ್ತು ಸಿಬ್ಬಂದಿಗಾಗಿ ಆಯೋಜಿಸಿದ್ದ ಎರಡು ದಿನಗಳ ಕಾರ್ಮಿಕ ಸಂಹಿತೆಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಕಾರ್ಮಿಕ ಕಾಯ್ದೆಗಳು ಜಾರಿಯಲ್ಲಿದ್ದವು. ಕಾಲಾನುಸಾರ ಅವುಗಳಲ್ಲಿ ಬದಲಾವಣೆಗಳನ್ನು ತಂದು ಕಾನೂನುಗಳನ್ನು ಸರಳೀಕರಿಸುವ ಪ್ರಯತ್ನ ಮಾಡಲಾಗಿದೆ. ಹೊಸ ಕಾನೂನುಗಳ ಜಾರಿಯ ಸಂದರ್ಭದಲ್ಲಿ ಕಾರ್ಮಿಕರ ಹಿತಾಸಕ್ತಿ, ಸಂವಿಧಾನದ ಆಶಯಗಳು ಹಾಗೂ ಅವರ ಹಕ್ಕುಗಳಿಗೆ ಆದ್ಯತೆ ನೀಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಹೊಸ ಕಾಯ್ದೆಗಳು ಮತ್ತು ತಿದ್ದುಪಡಿಗಳ ಕುರಿತು ವಕೀಲರು, ನ್ಯಾಯಾಧೀಶರು ಹಾಗೂ ಕಾರ್ಮಿಕ ಇಲಾಖೆ ಅಧಿಕಾರಿಗಳು ಸಮಗ್ರ ಜ್ಞಾನ ಹೊಂದಿರಬೇಕು. ಕಾನೂನಿನ ಸರಿಯಾದ ಅರ್ಥ ಮತ್ತು ಅದರ ಹಿಂದಿನ ಉದ್ದೇಶವನ್ನು ಅರಿತುಕೊಳ್ಳುವುದು ಮುಖ್ಯ. ಕೇವಲ ಕಾನೂನುಗಳನ್ನು ಜಾರಿಗೊಳಿಸುವುದಷ್ಟೇ ಸಾಕಾಗುವುದಿಲ್ಲ; ಅವುಗಳ ಪರಿಣಾಮಕಾರಿ ಅನುಷ್ಠಾನದ ಮೂಲಕ ಕಾರ್ಮಿಕರಿಗೆ ನ್ಯಾಯ ದೊರಕುವಂತೆ ಮಾಡಬೇಕು ಎಂದು ಹೇಳಿದರು.

ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಾ. ವೆಂಕಟೇಶ ಶಿಂದಿಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸರ್ಕಾರವು ಹಳೆಯ ಕಾರ್ಮಿಕ ಕಾನೂನುಗಳನ್ನು ಸರಳೀಕರಿಸಿ ನಾಲ್ಕು ಪ್ರಮುಖ ಕಾರ್ಮಿಕ ಸಂಹಿತೆಗಳ ರೂಪದಲ್ಲಿ ಕ್ರೋಡೀಕರಿಸುವ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

ಹೈಕೋರ್ಟ್‌ನ ಹಿರಿಯ ನ್ಯಾಯವಾದಿ ಪಿ. ವಿಲಾಸಕುಮಾರ ಮಾತನಾಡಿ, ನ್ಯಾಯಾಂಗದ ಕಾರ್ಯಕಲಾಪಗಳಲ್ಲಿ ಕನ್ನಡದಂತಹ ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ನೀಡುವುದು ಹಾಗೂ ಮಾತೃಭಾಷೆಯಲ್ಲಿ ನ್ಯಾಯ ದೊರೆಯುವ ವಾತಾವರಣ ನಿರ್ಮಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಮೊಹಮ್ಮದ್ ಬಷೀರ್ ಅನ್ಸಾರಿ, ದಾವಣಗೆರೆ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಡಾ. ಅವಿನಾಶ ನಾಯ್ಕ, ಕಲಬುರಗಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನರಸಿಂಹ ಮೆಂಡನ್, ಕಲಬುರಗಿ ಕಟ್ಟಡ ಕಾರ್ಮಿಕರ ಜಂಟಿ ಸಮನ್ವಯ ಸಮಿತಿ ಅಧ್ಯಕ್ಷ ಪ್ರಭು ಯಳಸಂಗಿ ಹಾಗೂ ಕಲಬುರಗಿ ಸಿಐಟಿಯು ಅಧ್ಯಕ್ಷ ಶ್ರೀಮಂತ ಜಮಾದಾರ ಸೇರಿದಂತೆ ವಿವಿಧ ಜಿಲ್ಲೆಗಳ ಕಾರ್ಮಿಕ ಇಲಾಖೆ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕಲಬುರಗಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ನಿರ್ದೇಶಕ ಸಂತೋಷ್ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು. ಹರಿದಾಸ್ ದೇಶಪಾಂಡೆ ಸ್ವಾಗತಿಸಿದರು. ಹಿರಿಯ ಕಾರ್ಮಿಕ ನಿರ್ದೇಶಕ ರವೀಂದ್ರ ಬಲ್ಲೂರ ವಂದಿಸಿದರು.



ಮಕ್ಕಳಲ್ಲಿ ನೈತಿಕ ಮೌಲ್ಯ ಬೆಳೆಸುವ ಕಾರ್ಯ ಶಿಕ್ಷಕರಿಂದಾಗಲಿ: ಕಲ್ಯಾಣಕುಮಾರ ಶೀಲವಂತ

ಕಲಬುರಗಿ: ಶಿಕ್ಷಣದ ಜತೆಗೆ ಸಮಾಜದ ಆಗುಹೋಗುಗಳ ಅರಿವು ಮೂಡಿಸಿ, ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಕಾರ್ಯವನ್ನು ಶಿಕ್ಷಕರು ಮಾಡಬೇಕು ಎಂದು ಶೈಕ್ಷಣಿಕ ಚಿಂತಕ ಕಲ್ಯಾಣಕುಮಾರ ಶೀಲವಂತ ಹೇಳಿದರು.

ನಗರದ ಕನ್ನಡ ಭವನದ ಸುವರ್ಣ ಸಭಾಭವನದಲ್ಲಿ ಸೋಮವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ದಿನಗಳಲ್ಲಿ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸುವುದು ಹಾಗೂ ಇಲಾಖೆಯ ಇತರ ಕಾರ್ಯಗಳನ್ನು ನಿರ್ವಹಿಸುವ ಒತ್ತಡಕ್ಕೆ ಸಿಲುಕಿದ್ದಾರೆ. ಇದರಿಂದ ಬೋಧನಾ ಕಾರ್ಯಕ್ಕೆ ತೊಂದರೆಯಾಗುತ್ತಿದ್ದು, ಕಲಿಕೆಯ ಗುಣಮಟ್ಟದ ಮೇಲೆಯೂ ಪರಿಣಾಮ ಬೀರುತ್ತಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ಜಿಲ್ಲೆಯ ಕಲಾವಿದರು, ಸಾಹಿತಿಗಳು ಹಾಗೂ ಬರಹಗಾರರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪರಿಷತ್ತು ನಿರಂತರವಾಗಿ ಶ್ರಮಿಸುತ್ತಿದೆ ಎಂದರು. ಅ.27 ಮತ್ತು 28ರಂದು ನಗರದಲ್ಲಿ ಕಲಬುರಗಿ ಜಿಲ್ಲಾ 23ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಬಸವರಾಜ ಚಿನಿವಾರ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಶಿವಲೀಲಾ ಎಸ್. ಕಲಗುರ್ಕಿ ಆಶಯ ನುಡಿಗಳನ್ನಾಡಿದರು. ಸಿದ್ಧಲಿಂಗೇಶ್ವರ ಪ್ರಕಾಶನದ ಬಸವರಾಜ ಕೋನೇಕ್, ಸಾಹಿತಿ ಮುಡುಬಿ ಗುಂಡೇರಾವ ಹಾಗೂ ಧರ್ಮರಾಜ ಜವಳಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರ ಸೇವೆಯನ್ನು ಗುರುತಿಸಿ 15 ಪ್ರತಿಭಾವಂತ ಶಿಕ್ಷಕರಿಗೆ ಸಾರ್ಥಕ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಶಿವರಾಜ ಅಂಡಗಿ, ಧರ್ಮಣ್ಣ ಎಚ್. ಧನ್ನಿ, ಸೈಯ್ಯದ್ ನಜೀರುದ್ದಿನ್ ಮುತ್ತವಲ್ಲಿ, ವಿಶಾಲಾಕ್ಷಿ ಮಾಯಣ್ಣವರ್, ಮಲ್ಲಿಕಾರ್ಜುನ ಇಬ್ರಾಹಿಂಪೂರ, ಕುಪೇಂದ್ರ ಬರಗಾಲಿ, ಕವಿತಾ ಕಾವಳೆ, ಭಾಗ್ಯಶ್ರೀ ಮರಗೋಳ, ಸುನೀತಾ ಮಾಳಗಿ, ಈರಣ್ಣ ಸೋನಾರ, ಶರಣು ಹಾಗರಗುಂಡಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವಂತೆ ಆಗ್ರಹ

ಚಿಂಚೋಳಿ: ತಾಲೂಕಿನ ಕಲ್ಲೂರು ರಸ್ತೆ ಸಮೀಪದಲ್ಲಿರುವ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯಲ್ಲಿ ಸ್ಥಳೀಯ ಟಿಪ್ಪರ್ ಹಾಗೂ ಲಾರಿ ಮಾಲೀಕರಿಗೆ ಸಾರಿಗೆ ಕೆಲಸದಲ್ಲಿ ಆದ್ಯತೆ ನೀಡಬೇಕು. ಸ್ಥಳೀಯ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು ಹಾಗೂ ಕಾರ್ಮಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮೂಲನಿವಾಸಿ ವಾಹನ ಚಾಲಕರ ಸಂಘ ಮತ್ತು ಲಾರಿ ಮಾಲೀಕರ ಸಂಘ ಆಗ್ರಹಿಸಿವೆ.



ಮೂಲ ನಿವಾಸಿ ವಾಹನ ಚಾಲಕರ ಸಂಘದ ಅಧ್ಯಕ್ಷ ಮಾರುತಿ ಗಂಜಗಿರಿ ಮಾತನಾಡಿ, ಸ್ಥಳೀಯ ವಾಹನ ಮಾಲೀಕರು ಬ್ಯಾಂಕ್‌ಗಳಿಂದ ಸಾಲ ಪಡೆದು ವಾಹನಗಳನ್ನು ಖರೀದಿಸಿದ್ದಾರೆ. ಸಾಲದ ಕಂತುಗಳು, ಡೀಸೆಲ್ ವೆಚ್ಚ, ವಿಮೆ, ತೆರಿಗೆ, ವಾಹನ ನಿರ್ವಹಣೆ ಹಾಗೂ ಚಾಲಕರ ವೇತನ ಸೇರಿದಂತೆ ಹಲವು ಆರ್ಥಿಕ ಹೊರೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ಥಳೀಯರಿಗೆ ಸಮರ್ಪಕವಾಗಿ ಸಾರಿಗೆ ಕೆಲಸ ದೊರೆಯದಿದ್ದರೆ ಅವರ ಜೀವನೋಪಾಯಕ್ಕೆ ತೀವ್ರ ತೊಂದರೆಯಾಗಲಿದೆ ಎಂದು ತಿಳಿಸಿದರು.

ಕಾರ್ಖಾನೆಗೆ ಕಚ್ಚಾ ಸಾಮಗ್ರಿಗಳ ಸಾಗಣೆ, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸಗಳಲ್ಲಿ ಸ್ಥಳೀಯ ವಾಹನ ಮಾಲೀಕರು ಹಾಗೂ ಚಾಲಕರಿಗೆ ಮೊದಲ ಆದ್ಯತೆ ನೀಡಬೇಕು. ಸಾರಿಗೆ ಗುತ್ತಿಗೆ ಮತ್ತು ಕೆಲಸ ಹಂಚಿಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಬೇಕು. ಸ್ಥಳೀಯ ವಾಹನ ಮಾಲೀಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಗಣಿಗಾರಿಕೆ ಇಲಾಖೆಯ ಅನುಮತಿ ಹಾಗೂ ರಾಯಲ್ಟಿ ನಿಯಮಗಳನ್ನು ಉಲ್ಲಂಘಿಸಿ ಕಚ್ಚಾ ಸಾಮಗ್ರಿಗಳನ್ನು ಸಾಗಿಸುವ ವಾಹನಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಅನುಮತಿ ಪಡೆದ ಗಣಿಗಾರಿಕೆ ಪ್ರದೇಶಗಳಿಂದ ಮಾತ್ರ ಕೆಂಪು ಮಣ್ಣನ್ನು ಸಾಗಿಸುವುದನ್ನು ಖಚಿತಪಡಿಸಬೇಕು. ನಿಯಮಾನುಸಾರ ಸಾಗಣೆ ನಡೆಸುವ ಸ್ಥಳೀಯ ವಾಹನ ಮಾಲೀಕರಿಗೆ ನ್ಯಾಯಯುತ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಕಾರ್ಖಾನೆಯ ಪ್ಯಾಕಿಂಗ್ ವಿಭಾಗದಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆಯೂ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ. ಕಾರ್ಮಿಕರಿಗೆ ಅಗತ್ಯ ಸುರಕ್ಷತಾ ಪರಿಕರಗಳು, ಮೂಲಭೂತ ಸೌಲಭ್ಯಗಳು ಹಾಗೂ ಕಾನೂನುಬದ್ಧ ಸೌಲಭ್ಯಗಳನ್ನು ಒದಗಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಒತ್ತಾಯಿಸಿವೆ.

ಹೊರಜಿಲ್ಲೆ ಹಾಗೂ ಹೊರರಾಜ್ಯಗಳಿಂದ ಬರುವ ವಾಹನ ಚಾಲಕರು ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ಅತಿವೇಗ ಹಾಗೂ ಅಜಾಗರೂಕ ಚಾಲನೆ ಮಾಡುವಂತಹ ಅಪಾಯಕಾರಿ ವರ್ತನೆಗಳಿಗೆ ಕಡಿವಾಣ ಹಾಕಬೇಕು. ರೈತರು, ದ್ವಿಚಕ್ರ ವಾಹನ ಸವಾರರು ಹಾಗೂ ಸಾರ್ವಜನಿಕರ ಜೀವಕ್ಕೆ ಅಪಾಯವಾಗದಂತೆ ಸಂಚಾರ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಮಸೂದ್ ಸೌದಾಗರ್, ಕಾರ್ಯದರ್ಶಿ ಬಾಬುಮಿಯ್ಯಾ, ಉಪಾಧ್ಯಕ್ಷ ಮಹೇಶ ಕುಸರಂಪಳ್ಳಿ, ಮುಖಂಡರಾದ ಮುಜೀಬ್ ಎಂ.ಎಂ.ಸಿ., ಪ್ರಕಾಶ್ ಭಕ್ತಂಪಳ್ಳಿ, ಗೋವಿಂದ, ಅಮರನಾಥ ಹೂವಿನಬಾವಿ, ವಿದ್ಯಾರ್ಥಿ ಸಂಘದ ಜಿಲ್ಲಾಧ್ಯಕ್ಷ ಮೋಹನ ಐನಾಪೂರ ಹಾಗೂ ಪ್ರಮುಖರಾದ ಮೋಬಿನ್, ಪಿಂಟು, ಮತೀನ್, ಸದ್ದಾಂ, ಶಿವಕುಮಾರ ಜಾಬಶೆಟ್ಟಿ, ಸಂತೋಷ, ದಾವುದ್, ಮೋಗಲಪ್ಪ ಬೇಡಕಪಳ್ಳಿ, ಅಶೋಕ, ಸುರೇಶ, ಕಮಲಕರ್, ಶಾಂತಕುಮಾರ್, ಜೈ ಭೀಮ್, ಮಿಥುನ್, ಅನ್ಸಾರ್, ಶಿವರಾಜ್, ಮಾರುತಿ, ಅಹೆಮದ್, ಲೋಕೇಶ್, ತಾನಾಜೀ, ನರಸಿಂಹಲು, ದಿಲೀಪ್ ಸೇರಿದಂತೆ ನೂರಾರು ವಾಹನ ಚಾಲಕರು ಹಾಗೂ ಮಾಲೀಕರು ಉಪಸ್ಥಿತರಿದ್ದರು.

ಔಷಧೀಯ ಸಸ್ಯಗಳ ವೈಜ್ಞಾನಿಕ ಸಂಶೋಧನೆಗೆ ಆದ್ಯತೆ ನೀಡಿ: ಡಾ. ಆರ್.ರಾಘವೇಂದ್ರ ರಾವ್



ಚಿಂಚೋಳಿ: ತಾಲೂಕಿನ ಕಲ್ಲೂರು ರಸ್ತೆ ಸಮೀಪದಲ್ಲಿರುವ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯಲ್ಲಿ ಸ್ಥಳೀಯ ಟಿಪ್ಪರ್ ಹಾಗೂ ಲಾರಿ ಮಾಲೀಕರಿಗೆ ಸಾರಿಗೆ ಕೆಲಸದಲ್ಲಿ ಆದ್ಯತೆ ನೀಡಬೇಕು. ಸ್ಥಳೀಯ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು ಹಾಗೂ ಕಾರ್ಮಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮೂಲನಿವಾಸಿ ವಾಹನ ಚಾಲಕರ ಸಂಘ ಮತ್ತು ಲಾರಿ ಮಾಲೀಕರ ಸಂಘ ಆಗ್ರಹಿಸಿವೆ.

ಮೂಲ ನಿವಾಸಿ ವಾಹನ ಚಾಲಕರ ಸಂಘದ ಅಧ್ಯಕ್ಷ ಮಾರುತಿ ಗಂಜಗಿರಿ ಮಾತನಾಡಿ, ಸ್ಥಳೀಯ ವಾಹನ ಮಾಲೀಕರು ಬ್ಯಾಂಕ್‌ಗಳಿಂದ ಸಾಲ ಪಡೆದು ವಾಹನಗಳನ್ನು ಖರೀದಿಸಿದ್ದಾರೆ. ಸಾಲದ ಕಂತುಗಳು, ಡೀಸೆಲ್ ವೆಚ್ಚ, ವಿಮೆ, ತೆರಿಗೆ, ವಾಹನ ನಿರ್ವಹಣೆ ಹಾಗೂ ಚಾಲಕರ ವೇತನ ಸೇರಿದಂತೆ ಹಲವು ಆರ್ಥಿಕ ಹೊರೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ಥಳೀಯರಿಗೆ ಸಮರ್ಪಕವಾಗಿ ಸಾರಿಗೆ ಕೆಲಸ ದೊರೆಯದಿದ್ದರೆ ಅವರ ಜೀವನೋಪಾಯಕ್ಕೆ ತೀವ್ರ ತೊಂದರೆಯಾಗಲಿದೆ ಎಂದು ತಿಳಿಸಿದರು.

ಕಾರ್ಖಾನೆಗೆ ಕಚ್ಚಾ ಸಾಮಗ್ರಿಗಳ ಸಾಗಣೆ, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸಗಳಲ್ಲಿ ಸ್ಥಳೀಯ ವಾಹನ ಮಾಲೀಕರು ಹಾಗೂ ಚಾಲಕರಿಗೆ ಮೊದಲ ಆದ್ಯತೆ ನೀಡಬೇಕು. ಸಾರಿಗೆ ಗುತ್ತಿಗೆ ಮತ್ತು ಕೆಲಸ ಹಂಚಿಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಬೇಕು. ಸ್ಥಳೀಯ ವಾಹನ ಮಾಲೀಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಗಣಿಗಾರಿಕೆ ಇಲಾಖೆಯ ಅನುಮತಿ ಹಾಗೂ ರಾಯಲ್ಟಿ ನಿಯಮಗಳನ್ನು ಉಲ್ಲಂಘಿಸಿ ಕಚ್ಚಾ ಸಾಮಗ್ರಿಗಳನ್ನು ಸಾಗಿಸುವ ವಾಹನಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಅನುಮತಿ ಪಡೆದ ಗಣಿಗಾರಿಕೆ ಪ್ರದೇಶಗಳಿಂದ ಮಾತ್ರ ಕೆಂಪು ಮಣ್ಣನ್ನು ಸಾಗಿಸುವುದನ್ನು ಖಚಿತಪಡಿಸಬೇಕು. ನಿಯಮಾನುಸಾರ ಸಾಗಣೆ ನಡೆಸುವ ಸ್ಥಳೀಯ ವಾಹನ ಮಾಲೀಕರಿಗೆ ನ್ಯಾಯಯುತ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಕಾರ್ಖಾನೆಯ ಪ್ಯಾಕಿಂಗ್ ವಿಭಾಗದಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆಯೂ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ. ಕಾರ್ಮಿಕರಿಗೆ ಅಗತ್ಯ ಸುರಕ್ಷತಾ ಪರಿಕರಗಳು, ಮೂಲಭೂತ ಸೌಲಭ್ಯಗಳು ಹಾಗೂ ಕಾನೂನುಬದ್ಧ ಸೌಲಭ್ಯಗಳನ್ನು ಒದಗಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಒತ್ತಾಯಿಸಿವೆ.

ಹೊರಜಿಲ್ಲೆ ಹಾಗೂ ಹೊರರಾಜ್ಯಗಳಿಂದ ಬರುವ ವಾಹನ ಚಾಲಕರು ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ಅತಿವೇಗ ಹಾಗೂ ಅಜಾಗರೂಕ ಚಾಲನೆ ಮಾಡುವಂತಹ ಅಪಾಯಕಾರಿ ವರ್ತನೆಗಳಿಗೆ ಕಡಿವಾಣ ಹಾಕಬೇಕು. ರೈತರು, ದ್ವಿಚಕ್ರ ವಾಹನ ಸವಾರರು ಹಾಗೂ ಸಾರ್ವಜನಿಕರ ಜೀವಕ್ಕೆ ಅಪಾಯವಾಗದಂತೆ ಸಂಚಾರ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

ವಡಗೇರಾ ಕೃಷ್ಣವೇಣಿ ಸಂಗಮದ ಸಂಗಮೇಶ್ವರ ದೇವಸ್ಥಾನದಲ್ಲಿ ಕುಡಿಯುವ ನೀರಿನ ಸಮಸ್ಯೆ : ಮಂಜುನಾಥ ರೆಡ್ಡಿ ಆಕ್ರೋಶ



ವಡಗೇರಾ: ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಹಾಗೂ ಪ್ರವಾಸಿ ತಾಣವಾದ ಕೃಷ್ಣವೇಣಿ ಸಂಗಮದ ಸಂಗಮೇಶ್ವರ ದೇವಸ್ಥಾನದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ದೇವಸ್ಥಾನಕ್ಕೆ ಆಗಮಿಸುವ ಭಕ್ತರು ಪರದಾಡುವಂತಾಗಿದೆ. ಬೋರ್‌ವೆಲ್ ಮತ್ತು ಕುಡಿಯುವ ನೀರಿನ ಶುದ್ಧೀಕರಣ ಘಟಕ ಕೆಟ್ಟು ಹಲವು ದಿನಗಳು ಕಳೆದಿದ್ದರೂ ದುರಸ್ತಿಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಕೋಡಿಹಳ್ಳಿ ಬಣ) ಜಿಲ್ಲಾ ಕಾರ್ಯಾಧ್ಯಕ್ಷ ಮಂಜುನಾಥ ರೆಡ್ಡಿ ಚೆನ್ನೂರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಸಂಗಮೇಶ್ವರ ದೇವಸ್ಥಾನಕ್ಕೆ ಕರ್ನಾಟಕ ಸೇರಿದಂತೆ ತೆಲಂಗಾಣ ಮತ್ತು ಆಂಧ್ರಪ್ರದೇಶದ ವಿವಿಧ ಭಾಗಗಳಿಂದ ಭಕ್ತರು ಆಗಮಿಸುತ್ತಾರೆ. ವಿಶೇಷವಾಗಿ ಅಮಾವಾಸ್ಯೆ ಸೇರಿದಂತೆ ವಿವಿಧ ಧಾರ್ಮಿಕ ದಿನಗಳಲ್ಲಿ ನೂರಾರು ಭಕ್ತರು ಸಂಗಮಕ್ಕೆ ಭೇಟಿ ನೀಡುತ್ತಾರೆ. ಆದರೆ, ಇಲ್ಲಿನ ಕುಡಿಯುವ ನೀರಿನ ಸಮಸ್ಯೆಯಿಂದ ಭಕ್ತರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ದೇವಸ್ಥಾನದಲ್ಲಿ ಕುಡಿಯುವ ನೀರಿನ ಸೌಲಭ್ಯ ಇಲ್ಲದ ಕಾರಣ ಭಕ್ತರು ನದಿಯ ನೀರನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನದಿ ನೀರು ಕುಡಿಯಲು ಯೋಗ್ಯವಲ್ಲದ ಕಾರಣ ಕೆಲವರು ಮನೆಯಿಂದಲೇ ಕುಡಿಯುವ ನೀರನ್ನು ತರುವಂತಾಗಿದೆ. ನೀರಿನ ಸಮಸ್ಯೆಯಿಂದ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆಯೂ ಕಡಿಮೆಯಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಕುರಿತು ಗೋನಾಲ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿರುವ ಕೃಷ್ಣವೇಣಿ ಸಂಗಮಕ್ಕೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಬಾರದು ಎಂದು ಮಂಜುನಾಥ ರೆಡ್ಡಿ ಒತ್ತಾಯಿಸಿದ್ದಾರೆ.

ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ಕೆಟ್ಟು ನಿಂತಿರುವ ಬೋರ್‌ವೆಲ್ ದುರಸ್ತಿಗೊಳಿಸಬೇಕು. ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಸರಿಪಡಿಸಿ, ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗೆ ಶುದ್ಧ ಕುಡಿಯುವ ನೀರು ಒದಗಿಸಬೇಕು. ಈ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸದಿದ್ದರೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ದೆಹಲಿ ಸಭೆ ವಿಫಲ : ರಾಷ್ಟ್ರೀಯ ಹೆದ್ದಾರಿ ತಡೆದು ಕಬ್ಬು ಬೆಳೆಗಾರರ ಆಕ್ರೋಶ

ಬೆಂಗಳೂರು, ಅ.13-

ಕಬ್ಬು ಬೆಳೆಗಾರರಿಗೆ ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆ ನೀಡ ಬೇಕೆಂದು ಆಗ್ರಹಿಸಿ, ರಾಜ್ಯದ ಹತ್ತಕ್ಕೂ ಹೆಚ್ಚು ಕಡೆ ರೈತರು ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರಿಂದಾಗಿ ಪ್ರಮುಖ ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿದೆ.

ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಕಬ್ಬು ಬೆಳೆಗಾರರು ಜಂಟಿ ಹೋರಾಟ ಹಮಿಕೊಂಡಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ತಲೆ ನೋವಾಗಿ ಪರಿಣಮಿಸಿದೆ.ಕೇಂದ್ರ ಆಹಾರ ಮತ್ತು ನಾಗರೀಕ ಪೂರೈಕೆ ಹಾಗೂ ಸಕ್ಕರೆ ಸಚಿವ ಪ್ರಹ್ಲಾದ್ ಜೋಷಿ ರಾಜ್ಯದ ಕಬ್ಬು ಬೆಳೆಗಾರರ ಜೊತೆ ನಿನ್ನೆ ದೆಹಲಿಯಲ್ಲಿ ಮಹತ್ವದ ಚರ್ಚೆ ನಡೆಸಿದರು. ಬಳಿಕ ಸಭೆ ಯಶಸ್ವಿಯಾಗಿದೆ. ಕಬ್ಬಿಗೆ ನ್ಯಾಯೋಚಿತ ದರ ನಗದಿ ಕುರಿತು ಪರಿಶೀಲಿಸಲು ರೈತರ ಬೇಡಿಕೆ ಆಧರಿಸಿ ಸಮಿತಿ ರಚಿಸಲಾಗುತ್ತಿದೆ ಎಂದು ಘೋಷಿಸಿದರು.

ಸಭೆಯ ಬಳಿಕ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರೈತ ಮುಖಂಡರು, ಕೇಂದ್ರ ಸರ್ಕಾರ ಬೇಡಿಕೆಗಳನ್ನು ಈಡೇರಿಸಲು ಒಂದು ತಿಂಗಳ ಕಾಲಾವಕಾಶ ಕೇಳಿತ್ತು. ಆದರೆ ಒಂದುವಾರ ಮಾತ್ರ ಕಾಲಾವಕಾಶ ನೀಡಿದ್ದೇವೆ ಎಂದು ಹೇಳಿದರು.

ವಿದ್ಯುತ್ ಬೇಡ, ಇಂಧನ ಬೇಡ; ಪೆಡಲ್ ತುಳಿದರೆ ಸಾಕು ಹಿಟ್ಟು ರೆಡಿ: ಬೆಳಗಾವಿ ವಿದ್ಯಾರ್ಥಿ ಆವಿಷ್ಕಾರ ನ್ಯಾಶನಲ್ ಇನ್ಸ್ಪೈರ್ ಅವಾರ್ಡ್‌ಗೆ ಆಯ್ಕೆ

ಬೆಳಗಾವಿ,ಅ.11-

ಹಳೆಯ ಸೈಕಲ್‌ನ್ನು ಬಳಸಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ವಿದ್ಯಾರ್ಥಿಯೋರ್ವ ಹಿಟ್ಟಿನ ಗಿರಣಿ ಸಿದ್ಧಪಡಿಸಿದ್ದಾನೆ. ಇದಕ್ಕೆ ವಿದ್ಯುತ್, ಇಂಧನ ಬೇಕಿಲ್ಲ. ಕಾಳು (ಧಾನ್ಯ) ಹಾಕಿ, ಪೆಡಲ್ ತುಳಿದರೆ ಸಾಕು ಹಿಟ್ಟು ಬರುತ್ತದೆ. ಈ ಆವಿಷ್ಕಾರ ಕೇಂದ್ರ ಸರ್ಕಾರದ ರಾಷ್ಟ್ರೀಯ ಇನ್ಸ್ಪೈರ್ ಪ್ರಶಸ್ತಿಗೂ ಆಯ್ಕೆ ಆಗಿದೆ. ಸೈಕಲ್ ಗಿರಣಿಯೊಂದಿಗೆ ಆ ವಿದ್ಯಾರ್ಥಿ ರಾಷ್ಟ್ರ ರಾಜಧಾನಿ ದೆಹಲಿಗೆ ಹೊರಟು ನಿಂತಿದ್ದು, ಅಲ್ಲಿ ಆತನ ವಿನೂತನ ಮಾದರಿ ಪ್ರದರ್ಶನಗೊಳ್ಳಲಿದೆ. ಇದು ಹಳ್ಳಿ ಹುಡುಗನ ದಿಲ್ಲಿ ಸಾಧನೆ.



ಬೆಳಗಾವಿ ತಾಲೂಕಿನ ಕಂಗ್ರಾಳಿ ಕೆಹೆಚ್ ಗ್ರಾಮದ ಮಾರ್ಕಂಡೇಯ ಮರಾಠಿ ಅನುದಾನಿತ ಪ್ರೌಢಶಾಲೆ 9ನೇ ತರಗತಿ ವಿದ್ಯಾರ್ಥಿ ಅಥರ್ವ ರಾಜು ಚವ್ಹಾಣ ಸೈಕಲ್ ಚಾಲಿತ ಹಿಟ್ಟಿನ ಗಿರಣಿ ತಯಾರಿಸಿರುವ ವಿದ್ಯಾರ್ಥಿ. ಇದನ್ನು ಆತ 7ನೇ ತರಗತಿಯಲ್ಲಿದ್ದಾಗಲೇ ಸಿದ್ಧಪಡಿಸಿದ್ದ. 2024-25ನೇ ಸಾಲಿನ ಇನ್ಸ್ಪೈರ್ ಅವಾರ್ಡ್‌ಗೆ ಇದು ಪಾತ್ರವಾಗಿದೆ. ಅಕ್ಟೋಬರ್ 12, 13 ಮತ್ತು 14 ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಪ್ರದರ್ಶನದಲ್ಲಿ ಇದು ಪ್ರದರ್ಶನವಾಗಲಿದೆ.

ವಿಜ್ಞಾನ ಶಿಕ್ಷಕಿ ಅಂಜನಾ ಮಾನೆ ಅವರ ಮಾರ್ಗದರ್ಶನದಲ್ಲಿ, ಸ್ಥಳೀಯ ಮೆಕ್ಯಾನಿಕ್ ಸಂಜಯ ಹಿರೇಮಠ ಅವರ ನೆರವಿನೊಂದಿಗೆ ಅಥರ್ವ ಹಿಟ್ಟಿನ ಗಿರಣಿ ಸಿದ್ಧಪಡಿಸಿದ್ದಾನೆ. ಇದಕ್ಕಾಗಿ ಟೈರ್ (ಚಕ್ರ) ತೆಗೆದ ಸೈಕಲ್, ರಾಡ್ ಸ್ಟಾಂಡ್, ಬೀಸುವ ಕಲ್ಲು, ಸ್ಟೋನ್ ಗ್ರೈಂಡರ್ ಸೇರಿ ಮತ್ತಿತರ ವಸ್ತುಗಳನ್ನು ಬಳಸಲಾಗಿದೆ. ಇದಕ್ಕೆ 8 ಸಾವಿರ ರೂಪಾಯಿ ವೆಚ್ಚ ತಗುಲಿದೆ.

ಗ್ರಾಮೀಣ ವಿದ್ಯಾರ್ಥಿಗಳಲ್ಲೂ ಪ್ರತಿಭೆ ಇರುತ್ತೆ, ಸೂಕ್ತ ಮಾರ್ಗದರ್ಶನ, ಅವಕಾಶ ಸಿಕ್ಕರೆ ಇಡೀ ದೇಶವೇ ಗುರುತಿಸುವ ಸಾಧನೆ ಮಾಡಬಹುದು ಎಂಬುದನ್ನು ಅಥರ್ವ ಸಾಬೀತು ಪಡಿಸಿದ್ದಾನೆ. ತಮ್ಮೂರಿನ ಹುಡುಗನ ಸಾಧನೆಗೆ ಇಡೀ ಊರು ಹೆಮ್ಮೆ ಪಡುತ್ತಿದ್ದು, ಗ್ರಾಮದಲ್ಲಿ ಬ್ಯಾನರ್ ಹಾಕಿ ಸಂಭ್ರಮಿಸಿದ್ದಾರೆ.

ಅಥರ್ವ ಚವ್ಹಾಣ ಹೇಳಿದ್ದೇನು? ಈಟಿವಿ ಭಾರತ ಜೊತೆಗೆ ಮಾತನಾಡಿದ ವಿದ್ಯಾರ್ಥಿ ಅಥರ್ವ ಚವ್ಹಾಣ, ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ಬಹಳಷ್ಟು ಇರುತ್ತದೆ. ಈ ಸಂದರ್ಭದಲ್ಲಿ ವಿದ್ಯುತ್ ಚಾಲಿತ ಹಿಟ್ಟಿನ ಗಿರಣಿ ನಡೆಯುವುದಿಲ್ಲ. ನಮ್ಮೂರಲ್ಲೂ ಈ ರೀತಿ ಸಮಸ್ಯೆಗಳನ್ನು ನಾನು ನೋಡಿದ್ದೆ. ಇದಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳೋಣ ಎಂದು ಯೋಚಿಸಿದಾಗ, ಶಿಕ್ಷಕಿ ಅಂಜನಾ ಮೇಡಂ ಜೊತೆಗೆ ಚರ್ಚಿಸಿ, ಸೈಕಲ್ ಚಾಲಿತ ಹಿಟ್ಟಿನ ಗಿರಣಿ ಸಿದ್ಧಪಡಿಸಲು ನಿರ್ಧರಿಸಿದೆ. ಅವರ ಮಾರ್ಗದರ್ಶನ, ಮೆಕ್ಯಾನಿಕ್ ಸಂಜಯ ಹಿರೇಮಠ ಅವರ ಸಹಾಯದೊಂದಿಗೆ ಪ್ರೊಜೆಕ್ಟ್ ತಯಾರಾಯ್ತು. ಈಗ ಇದು ರಾಷ್ಟ್ರಮಟ್ಟದ ಇನ್ಸ್ಪೈರ್ ಪ್ರಶಸ್ತಿಗೆ ಆಯ್ಕೆ ಆಗಿರುವುದಕ್ಕೆ ತುಂಬಾ ಖುಷಿ ಇದೆ ಎಂದಿದ್ದಾನೆ.

ವಿದ್ಯುತ್ ಬೇಕಿಲ್ಲ, ಸೈಕಲ್ ಪೆಡಲ್ ತುಳಿದರೆ ಸಾಕು ಹಿಟ್ಟು ರೆಡಿ: ನಾನು ತಯಾರಿಸಿದ ಸೈಕಲ್ ಗಿರಣಿಗೆ ಯಾವುದೇ ರೀತಿ ಇಂಧನ, ವಿದ್ಯುತ್ ಅವಶ್ಯಕತೆ ಇಲ್ಲ. ಇದರಿಂದ ಪರಿಸರಕ್ಕೆ ಯಾವುದೇ ರೀತಿ ಹಾನಿ ಆಗುವುದಿಲ್ಲ. 10 ವರ್ಷದಿಂದ 70 ವರ್ಷದೊಳಗಿನ ಯಾರು ಬೇಕಾದರೂ, ಸುಲಭವಾಗಿ ಉಪಯೋಗಿಸಬಹುದು. ಇದರಲ್ಲಿ ತಯಾರಾದ ಹಿಟ್ಟು ಉತ್ತಮ ಆಗಿರುತ್ತದೆ. ಆರೋಗ್ಯಕ್ಕೆ ಅನುಕೂಲ ಆಗುತ್ತದೆ. ಸೈಕಲ್ ಪೆಡಲ್ ತುಳಿಯುವುದರಿಂದ ಶಾರೀರಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಅಲ್ಲದೇ ಹಣ ಉಳಿತಾಯ ಕೂಡ ಆಗಲಿದೆ. ಭವಿಷ್ಯದಲ್ಲಿ ಇಂತಹ ಇನ್ನಷ್ಟು ಆವಿಷ್ಕಾರ ಮಾಡುವ ಗುರಿ ಹೊಂದಿದ್ದೇನೆ. ಅದರ ಮೊದಲ ಭಾಗವಾಗಿ ಆತ್ಮನಿರ್ಭರ್ ಭಾರತ ನಿರ್ಮಾಣಕ್ಕೆ ಇದು ನನ್ನ ಮೊದಲ ಕೊಡುಗೆ ಎಂದು ಅಥರ್ವ ಚವ್ಹಾಣ ಹರ್ಷ ವ್ಯಕ್ತಪಡಿಸಿದ್ದಾನೆ.

ಒಂದನೇಯ ಪುಟದಿಂದ

ತಾರಕಕ್ಕೇರಿದ ಸ್ಟಿಂಗ್ ಆಪರೇಷನ್ ವಿವಾದ : ಸಿಬಿಐ ತನಿಖೆಗೆ ಹೆಚ್ಡಿಕೆ ಆಗ್ರಹ

ಅವುಗಳಲ್ಲಿದ್ದ ಮಹಿಳೆಯರ ಗುರುತು ಬಹಿರಂಗವಾಗದಂತೆ ಕೈಗೊಳ್ಳಬೇಕಿದ್ದ ಕ್ರಮಗಳ ಕುರಿತು ಸರ್ಕಾರ ಉತ್ತರಿಸಬೇಕು.ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ ನಡೆದಿದೆ ಎಂಬ ಆರೋಪವನ್ನೂ ಅವರು ಮಾಡಿದರು. ಈ ಸಂಬಂಧ ದೇವರಾಜೇಗೌಡ ಮತ್ತು ಸಂಸದರಿಗೆ ಸಂಬಂಧಿಸಿದೆ ಎಂದು ಹೇಳಲಾದ ಸಂಭಾಷಣೆಯನ್ನು ಉಲ್ಲೇಖಿಸಿದ ಅವರು, ಪ್ರಕರಣದ ಹಿಂದೆ ರಾಜಕೀಯ ಉದ್ದೇಶಗಳಿವೆಯೇ ಎಂಬುದನ್ನು ಪರಿಶೀಲಿಸಬೇಕೆಂದು ಹೇಳಿದರು.

ಡಿ.ಕೆ. ಶಿವಕುಮಾರ್ ವಿರುದ್ಧ ನೇರ ಆರೋಪ

ಸ್ಟಿಂಗ್ ಆಪರೇಷನ್ ವಿವಾದಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಕಾರಣ. ಹಿಂದೆ ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿಯೂ ಸಂಚು ನಡೆದಿದೆ ಎಂಬ ತಮ ಆರೋಪವನ್ನು ಅವರು ಪುನರುಚ್ಚರಿಸಿದರು. ನೀವು ಬೆಳೆಸಿದ ವಿಚಾರವೇ ಈಗ ದೊಡ್ಡದಾಗಿದೆ. ಅದರ ಪರಿಣಾಮವನ್ನು ನೀವೇ ಎದುರಿಸಬೇಕು. ನಮ ಕುಟುಂಬದ ಮೇಲೆ ನಡೆದ ಘಟನೆಗಳನ್ನು ನಾವು ಸಹಿಸಿಕೊಂಡಿದ್ದೇವೆ. ಆದರೆ ಇದೇ ರೀತಿಯ ರಾಜಕೀಯ ಸಂಸ್ಕೃತಿ ಮುಂದುವರಿಯಬಾರದು.ತಮ ಕುಟುಂಬದ ಸದಸ್ಯರ ವಿರುದ್ಧ ಪ್ರಕರಣಗಳು ನಡೆದಾಗ ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆ ನಡೆದುಕೊಂಡ ರೀತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ರಾಜಕೀಯ ವಿರೋಧಿಗಳನ್ನು ಗುರಿಯಾಗಿಸಲು ತನಿಖಾ ಸಂಸ್ಥೆಗಳನ್ನು ಬಳಸಬಾರದು ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಧ್ವನಿ ಎತ್ತಬೇಕು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ, ಪ್ರಸ್ತುತ ಬೆಳವಣಿಗೆಗಳ ಬಗ್ಗೆ ಅವರು ಮೌನವಾಗಿರಬಾರದು.ಜಿಜಿಸಿದ್ದರಾಮಣ್ಣ ಯಾಕೆ ಹೆದರಬೇಕು? ಯಾಕೆ ಸ್ಟೇ ತೆಗೆದುಕೊಳ್ಳಬೇಕು? ನಿಮ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನವಾಗುತ್ತಿದ್ದರೆ ನೀವು ಹಿಂದೆ ಹೇಗೆ ಗಟ್ಟಿಯಾಗಿ ಮಾತನಾಡುತ್ತಿದ್ದಿರೋ ಹಾಗೆಯೇ ಈಗಲೂ ಮಾತನಾಡಬೇಕುಟಿಟಿ ಎಂದು ಅವರು ಮನವಿ ಮಾಡಿದರು.

ಸಿದ್ದರಾಮಯ್ಯ ಅವರ ವಿರುದ್ಧದ ಸ್ಟಿಂಗ್ ಆಪರೇಷನ್ ಆರೋಪದ ಕುರಿತು ಸಮಗ್ರ ತನಿಖೆ ನಡೆಯಬೇಕು. ಅದರ ಹಿಂದೆ ಯಾರಿದ್ದಾರೆ ಎಂಬುದು ಹೊರಬರಬೇಕು.

ತಪ್ಪು ಮಾಡಿದವರು ಯಾರೇ ಆಗಿದ್ದರೂ ಕಾನೂನು ಕ್ರಮ ಕೈಗೊಳ್ಳಬೇಕು.ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವ ಉದ್ದೇಶ ತಮ ಹೇಳಿಕೆಗಳ ಹಿಂದೆ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು, ಬದಲಿಗೆ ವಿವಾದಕ್ಕೆ ಪೂರ್ಣವಿರಾಮ ಬೀಳಬೇಕು ಮತ್ತು ರಾಜಕೀಯದಲ್ಲಿ ಜವಾಬ್ದಾರಿಯುತ ನಡೆ ಅಗತ್ಯವಿದೆ ಎಂದು ಹೇಳಿದರು. ಸ್ಟಿಂಗ್ ಆಪರೇಷನ್ ವಿವಾದದ ಸತ್ಯಾಂಶ ಹೊರಬರಲು ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ತಾವು ಒತ್ತಾಯಿಸುವುದಾಗಿ ಕುಮಾರಸ್ವಾಮಿ ಘೋಷಿಸಿದರು. ಈ ಸಂಬಂಧ ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಲಿದ್ದೇನೆ ಎಂದೂ ತಿಳಿಸಿದರು.

ದೇವದುರ್ಗ ತಾಲ್ಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ

ಅಗತ್ಯವಿದೆ. ಅನೇಕ ಖಾಸಗಿ ಶಾಲೆಗಳು ಕಡಿಮೆ ಶುಲ್ಕದಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ತರಬೇತಿಯನ್ನೂ ಒದಗಿಸುತ್ತಿವೆ. ಗ್ರಾಮೀಣ ಭಾಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಶೈಕ್ಷಣಿಕ ಅವಕಾಶಗಳು ದೊರೆಯಬೇಕು ಎಂಬುದು ಒಕ್ಕೂಟದ ಆಶಯವಾಗಿದೆ ಎಂದು ಹೇಳಿದರು.

ನೂತನ ಪದಾಧಿಕಾರಿಗಳ ವಿವರ:ಅಧ್ಯಕ್ಷ: ಮಾರೆಪ್ಪ ಕೊತ್ತದೊಡ್ಡಿ, ಪ್ರಧಾನ ಕಾರ್ಯದರ್ಶಿ: ಮಲ್ಲಿಕಾರ್ಜುನ ದೇಸಾಯಿ, ಗಬ್ಬೂರು, ಖಜಾಂಚಿ: ಬಸವರಾಜ ಮಡಿವಾಳ, ದೇವದುರ್ಗ, ಉಪಾಧ್ಯಕ್ಷರು:ಸಿದ್ದಯ್ಯತಾತಾ, ದೇವದುರ್ಗಮಲ್ಲಪ್ಪ ಕುಂಬಾರ, ಮಸರಕಲ್ಶಿವಣ್ಣ ಗಲಗ್ಬಸವರಾಜ ಕೊಪ್ಪರಪಾಮನಗೌಡ ಮಜ್ಜಿಗಿಸಂಘಟನಾ ಕಾರ್ಯದರ್ಶಿಗಳು:ಸುಭಾಷ್ ಕೊಪ್ಪರಚನ್ನಬಸವ ಗುರುವಿನ್ ತಾತಾ, ಗಬ್ಬೂರುಮಲ್ಲು ಹೂಗಾ,ರ ಗಾಣಧಾಳವೆಂಕೋಬ ಮಾನಸಗಲ್ಚಾಂದಪಾಶಾ ಆಲ್ಕೋಡ

ಕಾನೂನು ಸಲಹೆಗಾರರು:

ರಾಘವೇಂದ್ರ, ಕೋಲ್ಕ,ರ ಜಾಲಹಳ್ಳಿಶರಣಗೌಡ ಪಾಟೀಲ್, ಮಸರಕಲ್ಮಾಧ್ಯಮ ಪ್ರತಿನಿಧಿಗಳು:ಶರಣು ಪಲ್ಲೇದ, ಬಿ. ಗುಣೇಕಲ್ಮೇರಾಜ್ ಅಹಮ್ಮದ್, ಹೂವಿನ ಹೆಡಗಿಯಲ್ಲಪ್ಪ, ಹೂವಿನ ಹೆಡಗಿ

ಗೌರವಾಧ್ಯಕ್ಷರು:ಪ್ರಕಾಶ್ ಖೇಣೇದ್, ದೇವದುರ್ಗತಿರುಪತಿ ಸೂಗೂರು, ದೇವದುರ್ಗಚನ್ನಪ್ಪ ಬೂದಿನಾಳ, ಗಬ್ಬೂರು

ಬಸವರಾಜ ಪಂಪಾಪತಿ, ಜಾಲಹಳ್ಳಿ ಆಯ್ಕೆಯಾದರು. ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಮಡಿವಾಳ, ಸಿದ್ದಯ್ಯ ತಾತ, ಬಸವರಾಜ ಕೊಪ್ಪರ, ಪಾಮನಗೌಡ ಮಜ್ಜಗಿ, ಬಲಭೀಮ ಹೂಗಾರ ಉಪಸ್ಥಿತರಿದ್ದರು.

ಮೀಸಲಾತಿ ಹೆಚ್ಚಳ ವಿಚಾರ; ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ: ಛಲವಾದಿ ನಾರಾಯಣ ಸ್ವಾಮಿ

ವಿರೋಧಿಗಳು ಈಗಲೂ ಅದೇ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದಲ್ಲಿ ಎಸ್ ಐ ಆರ್ ವಿಷಯ ಇಟ್ಟುಕೊಂಡು ಕಾಕ್ರೋಚ್ ಜನತಾ ಪಾರ್ಟಿ ಹಾಗೂ ಕಾಂಗ್ರೆಸ್ ಪಕ್ಷ ದೇಶದಲ್ಲಿ ಅಭದ್ರತೆ ಸೃಷ್ಟಿ ಮಾಡುತ್ತಿದ್ದಾರೆ. ಮತಪಟ್ಟಿಯಿಂದ ಹೆಸರು ಕೈಬಿಟ್ಟಿರುವ ವಿಚಾರದಲ್ಲಿ ಚುನಾವಣೆ ಆಯೋಗಕ್ಕೆ ದೂರು ಸಲ್ಲಿಸದೇ ಪೊಲೀಸ್ ಠಾಣೆಗೆ ಹೋಗುತ್ತಿದ್ದಾರೆ. ಇವರ ಉದ್ದೇಶ ಜನಪರವಾಗಿಲ್ಲ, ರಾಜಕೀಯಮಾಡುತ್ತಿದ್ದಾರೆ ಎಂದರು.

ವಿಧಾನ ಪರಿಷತ್‌ನ ಶಿಕ್ಷಕರು ಹಾಗೂ ಪದವೀಧರರ ತಲಾ ಎರಡು ಕ್ಷೇತ್ರಗಳಿಗೆ ಅ.23ರಂದು ಚುನಾವಣೆ ನಡೆಯಲಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ, ಆಗ್ನೇಯ ಪದವೀಧರರ ಕ್ಷೇತ್ರ ಹಾಗೂ ಈಶಾನ್ಯ ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಈಗಾಗಲೇ 4 ಕ್ಷೇತ್ರದಲ್ಲಿ 3 ಕಡೆ ಬಿಜೆಪಿ ಅಧಿಕಾರದಲ್ಲಿದ್ದು, 1 ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿದೆ. ಈ ಬಾರಿ 4 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವ ಭರವಸೆ ಇದೆ ಎಂದರು.

ಬಿಜೆಪಿ ನಾಯಕ ಶಶೀಲ್ ಜಿ. ನಮೋಶಿ ಅವರು ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಲಿದ್ದು ಅವರ ಪರವಾಗಿ ಪ್ರಚಾರ ನಡೆಸಲಾಗುತ್ತಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರ ಪುಟ್ಟಣ್ಣಯ್ಯ ಅವರು ಚುನಾವಣೆಯಲ್ಲಿ ಗೆಲ್ಲಲು ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಉಡುಗೊರೆ ನೀಡುವುದು, ಹಣ ನೀಡುವ ಮೂಲಕ ಅಧಿಕಾರ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು ಎಂದು ತಿಳಿಸಿದರು. ಈ ಚುನಾವಣೆ ಪ್ರಬುದ್ಧರ ಚುನಾವಣೆ ಆಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಮಾಜಿ ಶಾಸಕ ತಿಪ್ಪರಾಜ ಹವಾಲ್ದಾ,ರ ರವೀಂದ್ರ ಜಲ್ದಾ,ರ ಸಿದ್ದನಗೌಡ ನೆಲಹಾಳ, ಡಾ.ನಾಗರಾಜ ಬಾಲ್ಕಿ ಉಪಸ್ಥಿತರಿದ್ದರು.

ಶಾಲಾ ಸಮಯದಲ್ಲಿ ಭಾರಿ ವಾಹನಗಳ ಸಂಚಾರ ನಿಷೇಧಿಸಿ! ಐದು ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ನಿಯಂತ್ರಣಕ್ಕೆ ಆಗ್ರಹ; ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ನೀಡಬೇಕು. ಅಪಾಯಕಾರಿ ಸ್ಥಳಗಳಲ್ಲಿ ವೇಗ ನಿಯಂತ್ರಕಗಳನ್ನು ಅಳವಡಿಸಿ, ರಸ್ತೆ ಸುರಕ್ಷತಾ ಫಲಕಗಳನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ

ಸಾರ್ವಜನಿಕರು ಹಲವು ಬಾರಿ ಸಮಸ್ಯೆಯನ್ನು ಗಮನಕ್ಕೆ ತಂದರೂ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸಂಘಟನೆ, ವಿದ್ಯಾರ್ಥಿಗಳ ಜೀವದ ಸುರಕ್ಷತೆಗೆ ಆದ್ಯತೆ ನೀಡಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಮನವಿಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಸಂಭವಿಸುವ ಅಪಘಾತ ಮತ್ತು ಪ್ರಾಣಹಾನಿಗೆ ಸಂಬಂಧಿಸಿದ ಇಲಾಖೆಗಳೇ ಹೊಣೆಗಾರರಾಗಬೇಕಾಗುತ್ತದೆ. ಸಮಸ್ಯೆ ಪರಿಹರಿಸದಿದ್ದರೆ ಸಂಬಂಧಿಸಿದ ಕಚೇರಿಗಳ ಎದುರು ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದೆ.

ಸಂಘಟನೆಯ ವಿಭಾಗೀಯ ಅಧ್ಯಕ್ಷ ಹೆಚ್.ಕೆ. ರವಿಕುಮಾ,ರ ಪ್ರಧಾನ ಕಾರ್ಯದರ್ಶಿ ಜಗ್ಗಿ ಉರುಕುಂದಪ್ಪ, ಜಿಲ್ಲಾಧ್ಯಕ್ಷ ಹೆಚ್. ಸತ್ಯರಾಜ, ಗೌರವಾಧ್ಯಕ್ಷ ಗೋವಿಂದ್ ಚುಟ್ಟಕಲ್, ನಗರಾಧ್ಯಕ್ಷ ಎಂ. ರಾಘವೇಂದ್ರ, ಹಾಗೂ ಉಪಾಧ್ಯಕ್ಷ ಟಿ. ವೀರೇಶ ಸೇರಿದಂತೆ ಪದಾಧಿಕಾರಿಗಳು ಈ ಕುರಿತು ಮನವಿ ಸಲ್ಲಿಸಿದ್ದಾರೆ.★

ಅಪಘಾತ ಸಂತ್ರಸ್ತನಿಗೆ ಪರಿಹಾರ ಪಾವತಿಸಲು ವಿಳಂಬ: ಕೆಕೆಆರ್‌ಟಿಸಿ ಬಸ್ ಜಪ್ತಿ

ಬೇಲಿಫ್‌ಗಳಾದ ಮಾನಪ್ಪ ಹಾಗೂ ಸಾಬಣ್ಣ ಅವರು ಬಸ್‌ನ್ನು ಜಪ್ತಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಈ ಸಂದರ್ಭದಲ್ಲಿ ವಕೀಲರಾದ ಅರುಣಕುಮಾರ, ಕರಿಯಪ್ಪ ಹಾಗೂ ವಿಜಯಲಕ್ಷ್ಮೀ ಉಪಸ್ಥಿತರಿದ್ದರು.

ಮೈಸೂರು ದಸರಾ ವೈಭವಕ್ಕೆ ತುಮಕೂರಿನ ಸಾಂಸ್ಕೃತಿಕ ಸ್ಪರ್ಶ



ತುಮಕೂರು,ಆ.13

ನಾಡಿನ ಸುಭಿಕ್ಷ, ಜನರ ಶಾಂತಿ, ನೆಮ್ಮದಿ ಹಾಗೂ ಮಳೆ-ಬೆಳೆ ಸಮೃದ್ಧಿಗಾಗಿ ತಾಯಿ ಚಾಮುಂಡೇಶ್ವರಿಯನ್ನು ಆರಾಧಿಸುವುದು ದಸರಾ ಉತ್ಸವದ ಉದ್ದೇಶವಾಗಿದೆ. ಬರಗಾಲದ ನಡುವೆಯೂ ದೇವಿಯ ಆರಾಧನೆ ಮೂಲಕ ಉತ್ತಮ ಮಳೆ-ಬೆಳೆಯಾಗಲಿ, ನಾಡು ಸುಭಿಕ್ಷವಾಗಲಿ ಎಂದು ಪ್ರಾರ್ಥಿಸುವುದು ನಮ್ಮ ಹಿರಿಯರು ನಮಗೆ ಬಿಟ್ಟುಹೋಗಿರುವ ಪರಂಪರೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ತಿಳಿಸಿದರು.

ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಜಿಲ್ಲಾಡಳಿತದ ವತಿಯಿಂದ ಹಮ್ಮಿಕೊಂಡಿರುವ 11 ದಿನಗಳ ತುಮಕೂರು ದಸರಾ ಉತ್ಸವಕ್ಕೆ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕಳೆದ ಎರಡು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ತುಮಕೂರು ದಸರಾ ಉತ್ಸವ ಯಶಸ್ವಿಯಾಗಲು ಜಿಲ್ಲೆಯ ಜನತೆ, ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ಸಹಕಾರವೇ ಕಾರಣ. ಪೊಲೀಸ್ ಇಲಾಖೆ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉತ್ಸವದ ಸಿದ್ಧತೆಗಾಗಿ ಶ್ರಮಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟೀಕೆಗಳಿಗೆ ಕಿವಿಗೊಟ್ಟು ದಸರಾ ಮುಂದುವರಿಕೆ

ಬರಗಾಲದ ಸಂದರ್ಭದಲ್ಲಿ ದಸರಾ ಆಚರಣೆ ಏಕೆ ಎಂಬ ಪ್ರಶ್ನೆಗಳು ಕೇಳಿಬರುತ್ತಿವೆ. ಆದರೆ, ನಾಡಿನಲ್ಲಿ ಉಂಟಾಗಿರುವ ಅನಾವೃಷ್ಟಿ ದೂರವಾಗಿ ಮಳೆ-ಬೆಳೆ ಪರಿಸ್ಥಿತಿ ಸುಧಾರಿಸಲಿ ಎಂಬ ಆಶಯದಿಂದಲೇ ನವರಾತ್ರಿಯಲ್ಲಿ ದೇವಿಯ ಆರಾಧನೆ ಮಾಡಲಾಗುತ್ತದೆ. ಹಿರಿಯರು ಬೆಳೆಸಿದ ಪರಂಪರೆಯನ್ನು ಮುಂದಿನ ಪೀಳಿಗೆಗೂ ಕೊಂಡೊಯ್ಯುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಕಳೆದ ಎರಡು ವರ್ಷಗಳ ದಸರಾ ಆಚರಣೆ ಕುರಿತು ವ್ಯಕ್ತವಾದ ಟೀಕೆ-ಟಿಪ್ಪಣಿಗಳನ್ನು ಸ್ವೀಕರಿಸಿದ್ದು, ಲೋಪಗಳಿದ್ದರೆ ಅವುಗಳನ್ನು ಸರಿಪಡಿಸಿಕೊಂಡು ಉತ್ಸವವನ್ನು ಮುಂದುವರಿಸಲಾಗುತ್ತಿದೆ ಎಂದರು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆರಂಭವಾದ ದಸರಾ ಆಚರಣೆ, ಸಾಮ್ರಾಜ್ಯದ ಪತನದ ನಂತರ ಮೈಸೂರು ಸಂಸ್ಥಾನದಲ್ಲಿ ಮುಂದುವರಿಯಿತು. ಅಧರ್ಮದ ವಿರುದ್ಧ ಧರ್ಮಕ್ಕೆ ಜಯ ಸಿಗಬೇಕು ಎಂಬ ಆಶಯದೊಂದಿಗೆ ಆರಂಭವಾದ ಮೈಸೂರು ದಸರಾ ಇಂದು ವಿಶ್ವಪ್ರಸಿದ್ಧವಾಗಿದೆ. ಮೈಸೂರು ದಸರಾ ಉತ್ಸವವನ್ನು ವೀಕ್ಷಿಸಲು ಸಾಧ್ಯವಾಗದವರು ತುಮಕೂರಿನಲ್ಲಿಯೇ ಅದರ ಸಂಭ್ರಮವನ್ನು ಕಣ್ತುಂಬಿಕೊಳ್ಳಲಿ ಎಂಬ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ದಸರಾ ಆಚರಣೆ ಆರಂಭಿಸಲಾಗಿದೆ ಎಂದು ವಿವರಿಸಿದರು.

ಯುವಜನರಿಗೆ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆ ಪರಿಚಯವಾಗಲಿ

ಸಾಹಿತಿ ಬೆಳ್ಳಾವೆ ನರಹರಿಶಾಸ್ತ್ರಿ, ನಾಟಕರತ್ನ ಡಾ. ಗುಬ್ಬಿ ವೀರಣ್ಣ, ಅಮರಶಿಲ್ಪಿ ಜಕಣಾಚಾರಿ ಸೇರಿದಂತೆ ಅನೇಕ ಗಣ್ಯರು ತುಮಕೂರು ಜಿಲ್ಲೆಯ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಇಂದಿನ ಯುವಜನರು ದಸರಾ ಉತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಅರಿತುಕೊಳ್ಳಬೇಕು ಎಂದು ಡಿಸಿಎಂ ಕರೆ ನೀಡಿದರು.

ಜಿಲ್ಲೆಯ ಮಕ್ಕಳ ಭವಿಷ್ಯ ಉತ್ತಮವಾಗಬೇಕು. ತುಮಕೂರನ್ನು ಕೈಗಾರಿಕಾ ಕ್ಷೇತ್ರದಲ್ಲಿ ಅಗ್ರಸ್ಥಾನಕ್ಕೆ ಕೊಂಡೊಯ್ಯುವ ಆಶಯ ಹೊಂದಿದ್ದೇವೆ ಎಂದು ತಿಳಿಸಿದ ಅವರು, ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ನಿರ್ಮಿಸಿರುವ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮೀಜಿ ಧಾರ್ಮಿಕ ಮಹಾಮಂಟಪದಲ್ಲಿ ಪ್ರತಿಷ್ಠಾಪಿಸಿರುವ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು ದೇವಿಯ ಕೃಪೆಗೆ ಪಾತ್ರರಾಗುವಂತೆ ಜಿಲ್ಲೆಯ ಜನತೆಗೆ ಮನವಿ ಮಾಡಿದರು.

ಅಂತರಂಗದ ಶುದ್ಧಿಗೆ ಹಬ್ಬಗಳ ಆಚರಣೆ ಅಗತ್ಯ

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ಮಾತನಾಡಿ, ಮನುಷ್ಯನ ಅಂತರಂಗ ಮತ್ತು ಬಹಿರಂಗದ ಶುದ್ಧಿಗಾಗಿ ಇಂತಹ ಹಬ್ಬಗಳ ಆಚರಣೆ ಅತ್ಯವಶ್ಯಕ. ಶಕ್ತಿರೂಪಿಣಿ ಚಾಮುಂಡೇಶ್ವರಿಯ ಆಶೀರ್ವಾದ ಜಿಲ್ಲೆಯ ಜನತೆಗೆ ದೊರೆಯಲಿ ಎಂದು ಹಾರೈಸಿದರು.

ಎಲೆರಾಂಪುರದ ಶ್ರೀ ಕುಂಚಿಟಿಗರ ಮಹಾಸಂಸ್ಥಾನ ಮಠದ ಡಾ. ಹನುಮಂತನಾಥ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ತುಮಕೂರು ದಸರಾವನ್ನು ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಕ್ರೀಡೆಗಳ ಸಮ್ಮಿಲನದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಮೈಸೂರು ದಸರಾ ಬಳಿಕ ತುಮಕೂರು ದಸರಾ ತನ್ನದೇ ಆದ ವೈಶಿಷ್ಟ್ಯದಿಂದ ಗಮನ ಸೆಳೆಯುತ್ತಿದೆ ಎಂದರು.

ಸಿದ್ದರಬೆಟ್ಟದ ಬಾಳೆಹೊನ್ನೂರು ಮಠದ ಶ್ರೀ ವೀರಭದ್ರ ಸ್ವಾಮೀಜಿ ಮಾತನಾಡಿ, ದುಷ್ಟಶಕ್ತಿಗಳನ್ನು ಸಂಹರಿಸಿದ ಚಾಮುಂಡೇಶ್ವರಿಯ ಆರಾಧನೆಯ ಹಿಂದಿನ ಆಶಯ ನಮ್ಮೊಳಗಿನ ಕಾಮ, ಕ್ರೋಧ, ಮದ ಮತ್ತು ಮತ್ಸರದಂತಹ ದುರ್ಗುಣಗಳನ್ನು ತೊಡೆದುಹಾಕುವುದಾಗಿದೆ ಎಂದು ಹೇಳಿದರು.

ಬೆಳ್ಳಾವಿ ಶ್ರೀ ಕಾರದೇಶ್ವರ ಮಠದ ಶ್ರೀ ಕಾರದ ವೀರಬಸವ ಮಹಾಸ್ವಾಮೀಜಿ ಮಾತನಾಡಿ, ಬರಗಾಲದ ನಡುವೆಯೂ ದಸರಾ ಆಚರಿಸಿ, ನಾಡಿನ ಬರಪರಿಸ್ಥಿತಿ ದೂರವಾಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸುವುದರಲ್ಲಿ ತಪ್ಪಿಲ್ಲ ಎಂದರು.

ಧಾರ್ಮಿಕ ಮಂಟಪದಲ್ಲಿ ಅರಮನೆಯ ವೈಭವ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಜ್ಯೋತಿಗಣೇಶ್ ಮಾತನಾಡಿ, ಚಾಮುಂಡೇಶ್ವರಿ ದೇವಿಯ ಪ್ರತಿಷ್ಠಾಪನೆಗಾಗಿ ನಿರ್ಮಿಸಿರುವ ಧಾರ್ಮಿಕ ಮಂಟಪವು ಅರಮನೆ ಪ್ರವೇಶಿಸಿದ ಅನುಭವ ನೀಡುತ್ತದೆ. ದೇವಿಯ ಅಲಂಕಾರ ಭಕ್ತಿಭಾವ ಮೂಡಿಸುವಂತಿದೆ. ದಸರಾ ಉತ್ಸವ ಧಾರ್ಮಿಕ ಭಾವನೆಗಳನ್ನು ಬೆಳೆಸುವುದರ ಜೊತೆಗೆ ಇಲ್ಲಿ ಆಯೋಜಿಸಿರುವ ವಸ್ತುಪ್ರದರ್ಶನ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಗೂ ನೆರವಾಗಲಿದೆ ಎಂದರು.

ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ ಸ್ವಾಗತಿಸಿದರು. ರಾಣಿ ಸತೀಶ್ ನಿರೂಪಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕುಮಿರ್ಜಿ ವಂದಿಸಿದರು.

ಕಾರ್ಯಕ್ರಮದಲ್ಲಿ ನವದೆಹಲಿಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಹಾಗೂ ಶಾಸಕ ಟಿ.ಬಿ. ಜಯಚಂದ್ರ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಎ.ಎನ್. ನಟರಾಜ್ ಗೌಡ, ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಮಹೇಶ್, ಶಾಸಕ ಷಡಕ್ಷರಿ, ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಹಾಗೂ ಶಾಸಕ ಎಚ್.ವಿ. ವೆಂಕಟೇಶ್, ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಜಿ. ಚಂದ್ರಶೇಖರ್ ಗೌಡ, ಬಿಎಂಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಎಂ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ. ಅಶ್ವಿಜಾ, ಮಹಾನಗರ ಪಾಲಿಕೆ ಆಯುಕ್ತೆ ಶುಭ, ತಹಶೀಲ್ದಾರ್ ರಾಜೇಶ್ವರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಧಾರ್ಮಿಕ ವಿಧಿವಿಧಾನಗಳೊಂದಿಗೆ ಉತ್ಸವಕ್ಕೆ ಚಾಲನೆ

ದಸರಾ ಉತ್ಸವದ ಅಂಗವಾಗಿ ಪ್ರತಿಷ್ಠಾಪಿಸಿರುವ ಚಾಮುಂಡೇಶ್ವರಿ ದೇವಿಯ ಶೈಲಪುತ್ರಿ ಅಲಂಕಾರ ಭಕ್ತರ ಗಮನ ಸೆಳೆಯಿತು. ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಮತ್ತು ಅವರ ಪತ್ನಿ ಕನ್ನಿಕಾ ಪರಮೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಗಣಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಶ್ರೀ ದುರ್ಗಾ ಹೋಮ ಹಾಗೂ ಪೂರ್ಣಾಹುತಿಯಲ್ಲಿ ಪಾಲ್ಗೊಂಡು ದೇವಿಯ ಆಶೀರ್ವಾದ ಪಡೆದರು.

ದಸರಾ ಉತ್ಸವದ ಧ್ವಜಾರೋಹಣಕ್ಕೂ ಮುನ್ನ ಹಸಿರು ಸೀರೆಯುಟ್ಟ ಮಹಿಳೆಯರು ಪೂರ್ಣಕುಂಭ 'ದೊಂದಿಗೆ ಉಪಮುಖ್ಯಮಂತ್ರಿ ದಂಪತಿ ಹಾಗೂ ಗಣ್ಯರನ್ನು ಸ್ವಾಗತಿಸಿದರು. ನಂದಿಧ್ವಜ ಪೂಜೆ ನೆರವೇರಿಸುವ ಮೂಲಕ ಧಾರ್ಮಿಕ ವಿಧಿವಿಧಾನಗಳಿಗೆ ಶಾಸ್ತ್ರೋಕ್ತವಾಗಿ ಚಾಲನೆ ನೀಡಲಾಯಿತು.

ಅಕ್ಟೋಬರ್ 11ರಿಂದ 21ರವರೆಗೆ ನಡೆಯಲಿರುವ ತುಮಕೂರು ದಸರಾ ಉತ್ಸವದಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ವಸ್ತುಪ್ರದರ್ಶನ ಸೇರಿದಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲಿವೆ.

ದುರ್ಗಾ ದೇವಿ ಮೆರವಣಿಗೆಯಲ್ಲಿ ಭೀಕರ ಅಪಘಾತ: ಮೂವರು ಮೃತ್ಯು, 10ಕ್ಕೂ ಅಧಿಕ ಮಂದಿಗೆ ಗಾಯ



ಬೆಳಗಾವಿ: ದುರ್ಗಾ ಮಾತಾ ದೌಡ ದೇವಿ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿದ್ದ ವಾಹನಕ್ಕೆ ಹಿಂಬದಿಯಿಂದ ಬಂದ ಟ್ರಕ್ ಢಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟ ಘಟನೆ ಹುಕ್ಕೇರಿ ತಾಲೂಕಿನ ಮಣಗುತ್ತಿ ಹಾಗೂ ಹತ್ತರಗಿ ಟೋಲ್ಗೇಟ್ ಸಮೀಪ ರವಿವಾರ ಬೆಳಗ್ಗೆ ಸಂಭವಿಸಿದೆ.

ಘಟನೆಯಲ್ಲಿ 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಅವರಲ್ಲಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.

ಹುಂಚ್ಯಾನಟ್ಟಿ ಗ್ರಾಮದಿಂದ ಬೆಳಗಾವಿಗೆ ಬಂದು ಮರಳುತ್ತಿದ್ದ ದೇವಿ ಮೆರವಣಿಗೆಯಲ್ಲಿದ್ದವರ ಮೇಲೆ ಟ್ರಕ್ ಹರಿದ ಪರಿಣಾಮ ಈ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದೆ.

ಅಪಘಾತದಲ್ಲಿ ಮೃತಪಟ್ಟವರನ್ನು ಪ್ರಕಾಶ, ಮಹೇಶ್ ಹಾಗೂ ದಾನೇಶ್ವರಿ ಎಂದು ಗುರುತಿಸಲಾಗಿದೆ. ಗಾಯಾಳುಗಳನ್ನು ಬೆಳಗಾವಿ ಜಿಲ್ಲಾಸ್ಪತ್ರೆ ಹಾಗೂ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆಯಲ್ಲಿ ಗಾಯಗೊಂಡವರ ಸಂಪೂರ್ಣ ವಿವರ ಇನ್ನೂ ಲಭ್ಯವಾಗಿಲ್ಲ. ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪೊಲೀಸರು ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

2,459 ಕೋಟಿ ರೂ. ಶಿವಂ ಸ್ಕ್ಯಾಮ್ ಪ್ರಕರಣ; ಆರು ಮಂದಿ ವಿರುದ್ಧ ಈ.ಡಿ. ಪ್ರಾಸಿಕ್ಯೂಷನ್ ದೂರು

ಬೆಳಗಾವಿ : ಕೋಟ್ಯಂತರ ರೂಪಾಯಿ ಮೌಲ್ಯದ ಶಿವಂ ಸ್ಕ್ಯಾಮ್ ಪ್ರಕರಣದ ತನಿಖೆಯನ್ನು ಜಾರಿ ನಿರ್ದೇಶನಾಲಯ (ಈ.ಡಿ.) ಮತ್ತಷ್ಟು ಚುರುಕುಗೊಳಿಸಿದೆ. ಪ್ರಕರಣದ ಪ್ರಮುಖ ಆರೋಪಿ ಹಾಗೂ ಕಿಂಗ್‌ಪಿನ್ ಎನ್ನಲಾಗಿರುವ ಶಿವಾನಂದ ಸಿದ್ದಪ್ಪ ನೀಲಣ್ಣವರ್ ಸಹಿತ ಒಟ್ಟು ಆರು ಮಂದಿ ವಿರುದ್ಧ ಈ.ಡಿ.ಯ ಮಂಗಳೂರು ಶಾಖೆ ವಿಶೇಷ ನ್ಯಾಯಾಲಯಕ್ಕೆ ಪ್ರಾಸಿಕ್ಯೂಷನ್ ದೂರು ಸಲ್ಲಿಸಿದೆ.


ಕಡಿಮೆ ಅವಧಿಯಲ್ಲಿ ಹೆಚ್ಚಿನ ಲಾಭ ನೀಡುವುದಾಗಿ ಸಾರ್ವಜನಿಕರನ್ನು ನಂಬಿಸಿ ಹಣ ಸಂಗ್ರಹಿಸಿ, 2,459 ಕೋಟಿಗೂ ಅಧಿಕ ಮೊತ್ತ ವಂಚಿಸಲಾಗಿದೆ ಎಂಬ ಆರೋಪ ಈ ಪ್ರಕರಣದಲ್ಲಿದೆ. ಇದೀಗ ವಂಚನೆಯಿಂದ ಸಂಗ್ರಹಿಸಿದ ಹಣವನ್ನು ಆರೋಪಿಗಳು ಯಾವೆಲ್ಲ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿದ್ದಾರೆ ಎಂಬ ಕುರಿತು ಈ.ಡಿ. ತನಿಖೆಯಲ್ಲಿ ಮಹತ್ವದ ಅಂಶಗಳು ಬಹಿರಂಗವಾಗಿವೆ.

ಈ.ಡಿ. ಸಲ್ಲಿಸಿರುವ ಪ್ರಾಸಿಕ್ಯೂಷನ್ ದೂರಿನ ಪ್ರಕಾರ, ಸಾರ್ವಜನಿಕರಿಂದ ಸಂಗ್ರಹಿಸಿದ ಹಣದ ಒಂದು ಭಾಗವನ್ನು ಷೇರು ಮಾರುಕಟ್ಟೆಯ ವಿವಿಧ ವಹಿವಾಟುಗಳಲ್ಲಿ ಹೂಡಿಕೆ ಮಾಡಲಾಗಿದೆ. ಅಲ್ಲದೆ, ಹಲವು ಸಹಕಾರ ಸಂಘಗಳಲ್ಲಿ ಸ್ಥಿರ ಠೇವಣಿ (ಎಫ್‌ಡಿ) ರೂಪದಲ್ಲಿ ಹಣ ಇರಿಸಿರುವುದು ಹಾಗೂ ರಿಯಲ್ ಎಸ್ಟೇಟ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿರುವ ಆರೋಪಗಳೂ ಕೇಳಿಬಂದಿವೆ.

ಆರೋಪಿಗಳು ತಮ್ಮ ಕುಟುಂಬ ಸದಸ್ಯರ ವಿವಿಧ ಬ್ಯಾಂಕ್ ಖಾತೆಗಳ ಮೂಲಕ ಹಣ ವರ್ಗಾವಣೆ ಮಾಡಿರುವುದಾಗಿಯೂ ಈ.ಡಿ. ಆರೋಪಿಸಿದೆ. ಅಕ್ರಮವಾಗಿ ಸಂಗ್ರಹಿಸಿದ ಹಣದ ಮೂಲವನ್ನು ಮರೆಮಾಚಿ, ಅದನ್ನು ವಿವಿಧ ಮಾರ್ಗಗಳ ಮೂಲಕ ವರ್ಗಾಯಿಸುವ ಮೂಲಕ ಹಣ ಅಕ್ರಮ ವರ್ಗಾವಣೆ (ಮನಿ ಲಾಂಡರಿಂಗ್) ನಡೆಸಿರುವ ಶಂಕೆಯ ಹಿನ್ನೆಲೆಯಲ್ಲಿ ತನಿಖೆ ಮುಂದುವರಿದಿದೆ.

ಸಾರ್ವಜನಿಕರ ಹಣದ ದುರುಪಯೋಗ ಮತ್ತು ಅಕ್ರಮ ಹಣ ವರ್ಗಾವಣೆಯ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ಮುಂದುವರಿದಿದೆ.

ಯಾದಗಿರಿ ಶಾಸಕರ ಹೇಳಿಕೆ ಖಂಡಿಸಿ ಬೃಹತ್ ಪ್ರತಿಭಟನೆ: 200ಕ್ಕೂ ಹೆಚ್ಚು ಟಿಪ್ಪರ್‌ಗಳ ಮೆರವಣಿಗೆ



ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಅವರು ಟಿಪ್ಪರ್‌ಗಳಿಗೆ ಬೆಂಕಿ ಹಚ್ಚುವುದಾಗಿ ನೀಡಿರುವ ಹೇಳಿಕೆಯನ್ನು ಖಂಡಿಸಿ, ಟಿಪ್ಪರ್ ಮಾಲೀಕರ ಸಂಘದ ನೇತೃತ್ವದಲ್ಲಿ ಸೋಮವಾರ ಯಾದಗಿರಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. 200ಕ್ಕೂ ಹೆಚ್ಚು ಟಿಪ್ಪರ್‌ಗಳೊಂದಿಗೆ ನಗರದಲ್ಲಿ ಮೆರವಣಿಗೆ ನಡೆಸಿದ ಮಾಲೀಕರು ಹಾಗೂ ಚಾಲಕರು ಶಾಸಕರ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಗೆ ಕಾಂಗ್ರೆಸ್ ಮುಖಂಡ ಶರಣಪ್ಪ ಮಾನೆಗಾರ್ ಬೆಂಬಲ ಸೂಚಿಸಿದರು.

ನಗರದ ಗಂಜ್ ಪ್ರದೇಶದಿಂದ ಆರಂಭವಾದ ಟಿಪ್ಪರ್‌ಗಳ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸುಭಾಷ್ ಚಂದ್ರ ವೃತ್ತ ತಲುಪಿತು. ಅಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ರಮೇಶ ಕೋಳಾರ ಅವರಿಗೆ ಮನವಿ ಸಲ್ಲಿಸಿ, ಶಾಸಕರು ತಮ್ಮ ಹೇಳಿಕೆಗೆ ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಶರಣಪ್ಪ ಮಾನೆಗಾ,ರ ''ಟಿಪ್ಪರ್ ಮಾಲೀಕರು ಶೋಕಿಗಾಗಿ ವಾಹನ ಖರೀದಿಸಿಲ್ಲ; ಕುಟುಂಬ ನಿರ್ವಹಣೆ ಮತ್ತು ಮಕ್ಕಳ ಭವಿಷ್ಯಕ್ಕಾಗಿ ಸಾಲ ಮಾಡಿ ವಾಹನಗಳನ್ನು ಖರೀದಿಸಿದ್ದಾರೆ'' ಎಂದು ಹೇಳಿದರು. ಅಕ್ರಮ ಚಟುವಟಿಕೆಗಳು ಕಂಡುಬಂದರೆ ಸಂಬಂಧಿಸಿದ ಅಧಿಕಾರಿಗಳು ಕಾನೂನು ಪ್ರಕಾರ ತನಿಖೆ ನಡೆಸಿ ಕ್ರಮ ಕೈಗೊಳ್ಳಲಿ. ಆದರೆ, ಕಾನೂನುಬದ್ಧವಾಗಿ ಜೀವನ ನಡೆಸುವವರನ್ನು ಬೆದರಿಸುವ ರೀತಿಯ ಹೇಳಿಕೆಗಳು ಸರಿಯಲ್ಲ ಎಂದು ಆಕ್ಷೇಪಿಸಿದರು.

ಟಿಪ್ಪರ್‌ಗಳಿಂದ ರಸ್ತೆಗಳು ಹಾಳಾಗುತ್ತಿವೆ ಎಂಬ ಆರೋಪಗಳಿದ್ದರೆ, ರಸ್ತೆ ಕಾಮಗಾರಿಗಳ ಗುಣಮಟ್ಟ ಮತ್ತು ಗುತ್ತಿಗೆದಾರರ ಹೊಣೆಗಾರಿಕೆಯ ಬಗ್ಗೆಯೂ ಸಮಗ್ರ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದರು.

ಅಹಿಂದ ರಾಜ್ಯ ಮುಖಂಡ ಹನುಮೇಗೌಡ ಬೀರನಕಲ್, ಉಮೇಶ ಮುದ್ನಾಳ, ತೇಜರಾಜ್ ರಾಠೋಡ್ ಸೇರಿದಂತೆ ಹಲವು ಮುಖಂಡರು ಮಾತನಾಡಿ, ಶಾಸಕರ ಹೇಳಿಕೆಯ ಕುರಿತು ಪರಿಶೀಲನೆ ನಡೆಸಿ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು. ಟಿಪ್ಪರ್ ಮಾಲೀಕರು ಮತ್ತು ಚಾಲಕರಿಗೆ ವಿನಾಕಾರಣ ತೊಂದರೆ ನೀಡಬಾರದು ಎಂದು ಒತ್ತಾಯಿಸಿದರು.

ಸುಮಾರು ಮೂರು ಗಂಟೆಗಳ ಕಾಲ ನಡೆದ ಪ್ರತಿಭಟನೆಯಿಂದ ನಗರದ ಕೆಲವು ರಸ್ತೆಗಳಲ್ಲಿ ವಾಹನ ಹಾಗೂ ಜನರ ಸಂಚಾರಕ್ಕೆ ಅಡಚಣೆ ಉಂಟಾಯಿತು. ಟಿಪ್ಪರ್ ಮಾಲೀಕರ ಸಂಘದ ಅಧ್ಯಕ್ಷ ರಘುಪತಿ, ಶಶಾಂಕ, ಪ್ರವೀಣಕುಮಾರ, ಮಲ್ಲು ಮಾಳಿಕೇರಿ, ಮಲ್ಲಯ್ಯ, ರವಿಕುಮಾರ, ಭೀಮರಾಯ ಬಂಕಲಗಿ, ಮಲ್ಲಣ್ಣ, ಎಂ.ಡಿ. ಶೋಫ್, ಪರಶುರಾಮ ನಾಯಕ, ಕಾಶಿನಾಥ ಸೇರಿದಂತೆ ಸಂಘದ ಪದಾಧಿಕಾರಿಗಳು, ಟಿಪ್ಪರ್ ಮಾಲೀಕರು ಹಾಗೂ ಚಾಲಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆಧುನಿಕ ಯುಗದ ದಸರಾ -ಕಣ್ಮನ ಸೆಳೆಯುವ ವಿಶೇಷತೆಗಳು



ನನ್ನಹಿಂದಿನಲೇಖನದಲ್ಲಿಮೈಸೂರುದಸರಾ- ನವರಾತ್ರಿ ವಿಜಯದಶಮಿ ಮತ್ತುಧರ್ಮಿಕಆಚರಣೆಗಳಬಗ್ಗೆತಿಳಿದುಕೊಂಡಿದ್ದೀರಿ. ಇಂದಿನನನ್ನಲೇಖನ ದಲ್ಲಿಆಧುನಿಕಯುಗದದಸರಾ- ಕಣ್ಮನಸೆಳೆಯುವ ವಿಶೇಷತೆಗಳಬಗ್ಗೆ ತಿಳಿದುಕೊಳ್ಳೋಣ.

ಪ್ರತಿರ್ವವೂ 10 ದಿನಗಳುಮೈಸೂರಿನಲ್ಲಿನಡೆಯುವ 'ಸಾಂಪ್ರದಾಯಿಕ ದಸರಾಆಚರಣೆಗಳು, ಆಯುಧಪೂಜೆ, ವಿಜಯದಶಮಿ, ಜಂಬೂಸವಾರಿ ಯಂತಹ ಆರ್ಷಕವೈವಿಧ್ಯಮಯ ಕರ್ಯಕ್ರಮಗಳ 'ಜೊತೆಜೊತೆಗೆ,ಸರ್ವಜನಿಕರಿಗೆ ಅದರಲ್ಲೂವಿಶೇಷವಾಗಿಯುವಜನರಿಗೆ, ಮಕ್ಕಳಿಗಾಗಿವಿವಿಧ ಮನೋರಂಜ ನಾತ್ಮಕಕರ್ಯಕ್ರಮಗಳನ್ನುಆಯೋಜಿಸಲಾಗುತ್ತದೆ. ಅವುಗಳಕಿರು ನೋಟಇಲ್ಲಿದೆ:

ದಸರೆಯವಿಶೇಷಕರ್ಯಕ್ರಮಗಳು:

ಜಂಬೂಸವಾರಿಮತ್ತುಆಧುನಿಕಶೈಲಿಯಸ್ತಬ್ಧಚಿತ್ರಗಳು

ವಿಜಯ ದಶಮಿಯದಿನದಂದುಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿ ಆಸೀನಳಾಗಿರುವ ತಾಯಿಚಾಮುಂಡೇಶ್ವರಿ ದೇವಿಮರ್ತಿಗೆ ಪುಷ್ಪರ್ಚನೆಸಲ್ಲಿಸಲಾಗುತ್ತದೆ. ಆಬಳಿಕ24 ಕುಶಾಲತೋಪುಗಳಗೌರವವನ್ನು ಸರ್ಪಣೆಮಾಡಲಾಗುತ್ತದೆ. ಅಲ್ಲಿಂದಅರಮನೆಆವರಣದಲ್ಲಿ ವಿಜಯದಶಮಿಯ ಅತ್ಯಾರ್ಷಕಮೆರವಣಿಗೆಗೆ ಚಾಲನೆದೊರೆಯುತ್ತದೆ. ಜಂಬೂಸವಾರಿಯುಅರಮನೆಆವರಣದಿಂದಬನ್ನಿಮಂಟಪದವರೆಗೆನಡೆಯುತ್ತದೆ. ಚಿನ್ನದಅಂಬಾರಿಯಲ್ಲಿವಿರಾಜಮಾನಳಾದದೇವಿಚಾಮುಂಡೇಶ್ವರಿಯನ್ನುಹೊತ್ತು 14 ಅಲಂಕೃತಗಜಗಳೊಂದಿಗೆ, ಜನಸಾಗರದೊಡನೆಧೀರ-ಗಂಭೀರನಡಿಗೆಯಲ್ಲಿ ಮೆರವಣಿಗೆಯಲ್ಲಿಸಾಗುವಗಜರಾಜನ ಠೀವಿಗೆಸರಿಸಾಟಿಯಿಲ್ಲ.

ಅಂಬಾರಿಹೊತ್ತುಬಲರಾಮನಜತೆಗೆಪೊಲೀಸ್ಬ್ಯಾಂಡ್ನಆರ್ಷಕತಾಳವಾದ್ಯಕಳೆಗಟ್ಟುತ್ತದೆ. ಅಲ್ಲದೆ, ಕಂಸಾಳೆಕುಣಿತ, ಕಲಾತಂಡಗಳನೃತ್ಯಪ್ರರ್ಶನಗಳಜತೆಗೆರಾಜ್ಯದ ವಿವಿಧಜಿಲ್ಲೆಗಳಸಂಸ್ಕೃತಿಸಾರುವಸ್ತಬ್ಧಚಿತ್ರಗಳುಎಲ್ಲರಗಮನಸೆಳೆಯುತ್ತದೆ. ಇದರವೀಕ್ಷಣೆಗೆಸಾವಿರಾರುಸಂಖ್ಯೆಯಲ್ಲಿಜನರುಸೇರುತ್ತಾರೆ.

ಅಲಂಕಾರಕ್ಕೆಸಜ್ಜಾಗಿರುವ 80 ಕೆ.ಜಿಚಿನ್ನದ 750 ಕೆ.ಜಿತೂಕದಅಂಬಾರಿ

ಜಂಬೂಸವಾರಿಯಲ್ಲಿಅಲಂಕೃತಆನೆಗಳು

ಸರ್ವಜನಿಕರಿಗಾಗಿದಸರಾಆಚರಣೆಗಳು:

ಯುವಸಂಭ್ರಮ, ಯುವದಸರಾ:

ದಸರಾಗೆಯುವಜನರನ್ನು ಸೆಳೆಯಲು ಯುವ ಸಂಭ್ರಮ ಮತ್ತು ಯುವದಸರಾಸಾಂಸ್ಕೃತಿಕ ಕರ್ಯಕ್ರಮಗಳನ್ನು ನಡೆಸಲಾಗುತ್ತದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವ ಬಯಲುರಂಗಮಂದಿರದಲ್ಲಿ ಯುವಸಂಭ್ರಮ ಸಮಾರಂಭ ನಡೆಯುತ್ತದೆ. ಇದರಲ್ಲಿಸ್ಥಳೀಯಕಲಾವಿದರಿಗೆ ಆದ್ಯತೆ ನೀಡಲಾಗುತ್ತದೆ. ಜನಪದಸೇರಿದಂತೆವಿವಿಧಪ್ರಾಕಾರಗಳ 'ನೃತ್ಯಕಲಾವಿದರ ಪ್ರರ್ಶನಗಳನ್ನು ಸೆಳೆಯುತ್ತದೆ. ವಿವಿಧಜಿಲ್ಲೆಗಳಶಾಲಾ-ಕಾಲೇಜು ವಿದ್ಯರ್ಥಿಗಳು ಈಸಾಂಸ್ಕೃತಿಕಕರ್ಯಕ್ರಮಗಳನ್ನುನಡೆಸಿಕೊಡುತ್ತಾರೆ.

ಇನ್ನುಯುವದಸರಾದಲ್ಲಿಸಿನಿಮಾತಾರೆಯರು ಹಾಗೂ ಖ್ಯಾತಗಾಯಕರಸಮಾಗಮವಾಗುತ್ತದೆ. ಉತ್ತನಹಳ್ಳಿಯಶ್ರೀಜ್ವಾಲಾಮುಖಿತ್ರಿ ಪುರಸುಂದರಿ ದೇವಸ್ಥಾನದ ಹತ್ತಿರದ ಸ್ಥಳದಲ್ಲಿಸಮಾರಂಭನಡೆಯುತ್ತದೆ. ತಮ್ಮನೆಚ್ಚಿನನಟ- ನಟಿಯರು, ಗಾಯಕರನ್ನು ನೋಡಲುಅಪಾರ ಸಂಖ್ಯೆಯಲ್ಲಿ ಯುವ ದಸರಾದಲ್ಲಿ ಜನಸೇರುತ್ತಾರೆ.

ಕಂಬಳ:

ಮೈಸೂರುದಸರಾದಲ್ಲಿ ಇದೇ ಮೊದಲ ಬಾರಿಗೆ ಕರಾವಳಿಯಕೃಷಿಸಂಸ್ಕೃತಿ ಹಾಗೂ ಜನಪದದ ಪ್ರತೀಕವಾದಕಂಬಳ ಆಯೋಜನೆ ಮಾಡಲಾಗುತ್ತಿದೆ. ಅಕ್ಟೋಬರ್ 18 ಮತ್ತು 19 ರಂದುಮೈಸೂರಿನ ಸಾತಗಳ್ಳಿಯಲ್ಲಿಆಯೋಜಿಸಲು ಅಧಿಕೃತವಾಗಿಸಿದ್ಧತೆಗಳು ನಡೆದಿವೆ. ದಷ್ಟಪುಷ್ಟವಾಗಿ ಬೆಳೆಸಿದಕೋಣಗಳನ್ನು ಹಸನಾಗಿಹದ ಮಾಡಿದ ಮಣ್ಣಿನಗದ್ದೆಯಲ್ಲಿಓಡಿಸುವಸ್ಪರ್ಧೆಯೇಕಂಬಳ. ಈಕ್ರೀಡೆದಕ್ಷಿಣಕನ್ನಡಮತ್ತು ಉಡುಪಿಜಿಲ್ಲೆಯಜನಪದದೊಂದಿಗೆ ಹಾಸು ಹೊಕ್ಕಾಗಿದೆ. ಸಾಂಸ್ಕೃತಿಕಹಿನ್ನೆಲೆಯ ಈ ಕ್ರೀಡೆಯನ್ನು ದಸರಾದಲ್ಲಿ ಆಯೋಜಿಸಲಾಗುತ್ತಿದೆ.

ವಿವಿಧಬಗೆಯಮೇಳಗಳು:

ದಸರಾದಲ್ಲಿಕೃಷಿ, ಆಹಾರಮೇಳಗಳನ್ನುನಡೆಸಲಾಗುತ್ತದೆ. ರಾಜ್ಯದನಾನಾಭಾಗಗಳಸ್ಥಳೀಯಹಾಗೂವಿಶೇಷತಿನಿಸುಗಳುಮಳಿಗೆಗಳಲ್ಲಿಸಿಗುತ್ತವೆ. ಆಹಾರಪ್ರಿಯರಿಗೆಈಮೇಳಖುಷಿಕೊಡುತ್ತದೆ. ಇಲ್ಲಿಸ್ಪರ್ಧೆಗಳನ್ನುಸಹ ಆಯೋಜನೆಮಾಡಲಾಗುತ್ತದೆ. ತಿನ್ನುವಮತ್ತುಅಡುಗೆಸ್ಪರ್ಧೆಗಳುನಡೆಯುತ್ತವೆ. ವಿಜೇತರಿಗೆ ವಿಶೇಷಬಹುಮಾನಗಳುಸಹಇರುತ್ತವೆ. ಕೃಷಿಮೇಳವು ರೈತರಿಗೆಸಹಕಾರಿಯಾಗಲಿದೆ. ನಾನಾತಳಿಯಬೆಳೆಗಳುಮತ್ತುಹಣ್ಣುಗಳಪ್ರರ್ಶನ, ಮಾರಾಟಕ್ಕೆ ಅವಕಾಶಇರುತ್ತದೆ. ರೈತರಿಗೆಕೃಷಿ ಸಂಬಂಧಿತ ಸಲಹೆಗಳಿಗಾಗಿ



ವಿಚಾರಣಾ ಸಂಕಿರಣಗಳನ್ನು ಸಹ ಆಯೋಜನೆಮಾಡಲಾಗುತ್ತದೆ.

ಫಲಪುಷ್ಪ, ವಸ್ತುಪ್ರರ್ಶನ:

ದಸರಾದಲ್ಲಿ ಫಲಪುಷ್ಪ ಮತ್ತು ವಸ್ತು ಪ್ರರ್ಶನಗಳು ಪ್ರಮುಖ ಆರ್ಷಣೆಯಾಗಿದೆ. ವಿವಿಧಬಗೆಯ ಪುಷ್ಪಗಳಿಂದ 'ನಾನಾಮಾದರಿಗಳನ್ನು ರಚಿಸಿಪ್ರರ್ಶಿಸಲಾಗುತ್ತದೆ. ಆರ್ಷಕಪುಷ್ಪಮಾದರಿಗಳು ಜನರನ್ನುಸೆಳೆಯು ವಂತಿರುತ್ತವೆ. ಅನೇಕರಿಗೆಇದುಸೆಲ್ಫಿಸ್ಪಾಟ್ಆಗುತ್ತದೆ. ಧ್ಯಾರಗಳಪ್ರಮುಖ ಯೋಜನೆಗಳನ್ನು ವಸ್ತು ಪ್ರರ್ಶನದಮೂಲಕತಿಳಿಸಲಾಗುತ್ತದೆ. ನಾಡು-ದೇಶದಇತಿಹಾಸ, ಪ್ರವಾಸಿತಾಣಗಳಬಗ್ಗೆಅರಿವುಮೂಡಿಸುವ ಮಾದರಿಗಳು ಇರುತ್ತವೆ.

ಗೊಂಬೆಪ್ರರ್ಶನ:

ಸ್ಥಳೀಯವಾಗಿ ಗೊಂಬೆ ಹಬ್ಬ ಅಥವಾ ಬೊಂಬೆಮನೆ ಎಂದು ಕರೆಯಲ್ಪಡುವ ಮೈಸೂರುದಸರಾಗೊಂಬೆ ಪ್ರರ್ಶನವುಶತ ಮಾನಗಳಷ್ಟುಹಳೆಯಸಂಪ್ರದಾಯವಾಗಿದೆ. ಇದರಲ್ಲಿನವರಾತ್ರಿಹಬ್ಬದ ಸಂರ್ಭದಲ್ಲಿಮನೆಗಳುಮತ್ತುಸರ್ವಜನಿಕಸ್ಥಳಗಳಲ್ಲಿಸುಂದರವಾಗಿ ಹಾಗೂವ್ಯವಸ್ಥಿತವಾಗಿ ಜೋಡಿಸಲಾದ ಗೊಂಬೆಗಳುಮತ್ತುಮರ್ತಿಗಳನ್ನು ಪ್ರರ್ಶಿಸಲಾಗುತ್ತದೆ. ಈಪ್ರರ್ಶನವುರಾಮಾಯಣದಂತ ಹಪೌರಾಣಿಕ ಮಹಾ ಕಾವ್ಯಗಳು, ದಸರಾಮೆರವಣಿಗೆಯ ದೃಶ್ಯಗಳು (ಜಂಬೂಸವಾರಿ),



ನವದರ್ಗೆಯರುಮತ್ತು ಅಷ್ಟಲಕ್ಷ್ಮಿಯರಜೊತೆಗೆಸಮಕಾಲೀನ ಅಥವಾಸಾಮಾಜಿಕ, ಸಾಂಸ್ಕೃತಿಕವಿಷಯಗಳನ್ನುಹೆಚ್ಚಾಗಿ ಬಿಂಬಿಸುತ್ತವೆ.

ಮಕ್ಕಳದಸರಾ:

ದಸರಾದಲ್ಲಿವಿಶೇಷಆರ್ಷಣೆ ಮಕ್ಕಳ ದಸರಾಆಗಿದೆ. ಮಕ್ಕಳದಸರಾದಲ್ಲಿ ವಿಶೇಷವಾಗಿ ವಿವಿಧ ಮಕ್ಕಳ ಸಾಂಸ್ಕೃತಿಕಕರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ವಿಶೇಷಸಾಧನೆತೋರಿದ ಮಕ್ಕಳಿಂದ ಮಕ್ಕಳ ದಸರಾವನ್ನು ಉದ್ಘಾಟಿಸಲಾಗುತ್ತದೆ.

ಗೋಷ್ಠಿಗಳು:

ಖ್ಯಾತವಿದ್ವಾಂಸರು, ಸಾಹಿತಿಗಳು, ಕವಿಗಳನೆಲೆವೀಡುಮೈಸೂರು. ಸಂಗೀತ-ಸಾಹಿತ್ಯಕ್ಷೇತ್ರಗಳಿಗೆಮೈಸೂರುತನ್ನದೇಆದಕೊಡುಗೆನೀಡಿದೆ. ಆದ್ದರಿಂದದಸರಾದಲ್ಲಿಕವಿಗೋಷ್ಠಿ, ವಿಚಾರಸಂಕಿರಣಗಳು, ಸಂಗೀತಕಚೇರಿ ಗಳನ್ನು ಆಯೋಜಿಸಲಾಗುತ್ತದೆ. ಯುವಕವಿಗೋಷ್ಠಿ ಮೂಲಕ ಸಾಹಿತ್ಯಾಸಕ್ತರನ್ನು ಸೆಳೆಯಲಾಗುತ್ತದೆ. ಓದುಗಪ್ರಿಯರಿಗಾಗಿ ಪುಸ್ತಕಮೇಳ ಕೂಡನಡೆಸಲಾಗುತ್ತದೆ. ಸಂಗೀತಪ್ರಿಯರಿಗಾಗಿಅರಮನೆಯಲ್ಲಿ ಸಂಗೀತ ಕರ್ಯಕ್ರಮಗಳು ಜರುಗುತ್ತವೆ. ಖ್ಯಾತವಿದ್ವಾಂಸರು, ಕಲಾವಿದರುಸಂಗೀತ ಕರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಕಲಾಸಕ್ತರಿಗಾಗಿ ಚಲಚಿತ್ರೋತ್ಸವ, ನಾಟಕಪ್ರರ್ಶನಗಳುಸಹನಡೆಯುತ್ತವೆ.

ಪಂಜಿನಕವಾಯತು:

ವಿಜಯದಶಮಿಯಂದುಜಂಬೂಸವಾರಿಮೆರವಣಿಗೆ ಬಳಿಕ ಸಂಜೆ ಮೈಸೂರಿನಬನ್ನಿ ಮಂಟಪಮೈದಾನದಲ್ಲಿನಡೆಯುವಅತ್ಯಂತಆರ್ಷಕಮತ್ತು ರೋಮಾಂಚಕಅಂತಿಮಕರ್ಯಕ್ರಮಪಂಜಿನಕವಾಯತು. ಇದು ಪೊಲೀಸ್ಪಡೆಗಳಕ ವಾಯತು, ಸಾಹಸಪ್ರರ್ಶನ ಹಾಗೂ ಬಣ್ಣಬಣ್ಣದ ಫಳಫಳಿಸುವ ಪಂಜುಗಳ ಬೆಳಕಿನಸಂಭ್ರಮದೊಂದಿಗೆ ಕಣ್ಮನಸೆಳೆಯುತ್ತದೆ.

ಅತ್ಯಾರ್ಷಕಅಶ್ವಾರೋಹಿದಳದಸಾಹಸಗಳು, ಮೈಜುಮ್ಮೆನಿಸುವಮೋಟರ್ಸೈಕಲ್ಸಾಹಸಪ್ರರ್ಶನಗಳು (ಡರ್‍ಡೆವಿಲ್ಸ್ಟಂಟ್ಸ್), ಪೊಲೀಸ್ಬ್ಯಾಂಡ್ವಾದನಮತ್ತುಪಂಜುಗಳೊಂದಿಗೆ ಸಾಮೂಹಿಕಕವಾಯತು ನಡೆಯುತ್ತದೆ. ರಾತ್ರಿಯವೇಳೆಆಕಾಶದಲ್ಲಿ ಮೂಡುವರ್ಣ ರಂಜಿತಸುಂದರ ಸಿಡಿಮದ್ದುಪ್ರರ್ಶನ ಹಾಗೂ ಲೇಸ/ಡ್ರೋನ್ಶೋಕೂಡಗಮನಸೆಳೆಯುತ್ತದೆ. ದಸರಾಗೆಅಂತಿಮಸ್ಪರ್ಶನೀಡುವಕರ್ಯಕ್ರಮಇದಾಗಿದೆ. ರಾಜರಕಾಲದಿಂದಲೂ ನಡೆದುಕೊಂಡು ಬಂದಿರುವ ಈ ಪರಂಪರೆಯು ದಸರಾಉತ್ಸವದ ಸಮಾಪ್ತಿಯನ್ನುಸಾರುತ್ತದೆ.

ವಿದ್ಯುತ್ದೀಪಾಲಂಕಾರ:

ನಾಡಹಬ್ಬದಸರಾಮಹೋತ್ಸವದಅಂಗವಾಗಿಚಾಮುಂಡೇಶ್ವರಿವಿದ್ಯುತ್ಸರಬರಾಜುನಿಗಮದ (ಅಇಅ) ವತಿಯಿಂದಮೈಸೂರುನಗರದಲ್ಲಿಸುಮಾರು130 ರಿಂದ 136 ಕಿಲೋಮೀಟರ್ಉದ್ದದರಸ್ತೆಗಳಿಗೆವೈವಿಧ್ಯಮಯಹಾಗೂ ಆರ್ಷಕವಿದ್ಯುತ್ದೀಪಾಲಂಕಾರಮಾಡಲಾಗುತ್ತದೆ. ಮೈಸೂರುಅರಮನೆಗೂ ಸಹವಿಶೇಷವಾಗಿದೀಪಾಲಂಕಾರಮಾಡಲಾಗುತ್ತದೆ.

ಇಡೀಮೈಸೂರು ನಗರವನ್ನುಕಂಗೊಳಿಸುವಂತೆ ಮಾಡುವ ಈ ದೀಪಾಲಂಕಾರವು ನಗರದಸುಮಾರು 118 ಪ್ರಮುಖವೃತ್ತಗಳು ಮತ್ತುಜಂಕ್ಷನ್ಗಳನ್ನುಒಳಗೊಂಡಿರುತ್ತದೆ. ಇದರೊಂದಿಗೆರ್ನಾಟಕದಸಂಸ್ಕೃತಿ ಮತ್ತುಸಾಧಕರನ್ನುಬಿಂಬಿಸುವ 75ಕ್ಕೂ ಹೆಚ್ಚು ಕಲಾಕೃತಿಗಳನ್ನು ಎಲ್ಇಡಿದೀಪಗಳ ಮೂಲಕಪ್ರರ್ಶಿಸಲಾಗುತ್ತದೆ. ದೇಶ ಹಾಗೂ ವಿದೇಶಗಳಿಂದ ಬರುವ ಪ್ರವಾಸಿಗರವೀಕ್ಷಣೆಗಾಗಿ ಈ ಅದ್ಭುತಬೆಳಕಿನಹಬ್ಬ ವನ್ನುಒಟ್ಟು21 ದಿನಗಳಕಾಲ ಮುಂದುವರಿಸಲಾಗುತ್ತದೆ.

ಮೈಸೂರು ದಸರಾಕೇವಲ ಧರ್ಮಿಕಉತ್ಸವವಲ್ಲ. ಇದುರ್ನಾಟಕದ ಸಾಂಸ್ಕೃತಿಕಪರಂಪರೆ, ಕಲೆ, ಸಂಗೀತ, ನೃತ್ಯ, ಜನಪದಸಂಪ್ರದಾಯಗಳು ಮತ್ತು ಐತಿಹಾಸಿಕಪ್ರಾಮುಖ್ಯತೆಯಸಮುತ್ಸವವಾಗಿದೆ. ಅರಮನೆಯೊಳಗಿನ ಸಾಂಪ್ರದಾಯಿಕ ಆಚರಣೆಗಳು ಮೈಸೂರುಒಡೆಯರ ಇತಿಹಾಸವನ್ನುನೆನಪಿಸಿದರೆ, ಸರ್ವಜನಿಕದಸರಾ ಕರ್ಯಕ್ರಮಗಳು ಆ ಪರಂಪರೆಯನ್ನುಜನಸಾಮಾನ್ಯರೊಂದಿಗೆಸಂರ್ಕಿಸುತ್ತವೆ.ಆದ್ದರಿಂದ, ಮನಮೋಹಕ ದಸರಾದ ಸೊಬಗನ್ನುಸವಿಯಲುದೇಶ ಮಾತ್ರವಲ್ಲದೇ, ವಿದೇಶೀಪ್ರವಾಸಿಗರೂ ಹೆಚ್ಚಿನಸಂಖ್ಯೆಯಲ್ಲಿ ಮೈಸೂರಿಗೆಆಗಮಿಸುತ್ತಾರೆ.

ಸಮಾರೋಪ:

ಮೈಸೂರುದಸರಾ ಹಲವು ಶತಮಾನಗಳ ಇತಿಹಾಸ, ಧರ್ಮಿಕ ನಂಬಿಕೆ, ರಾಜ ಪರಂಪರೆ, ಕಲೆ, ಸಂಸ್ಕೃತಿಮತ್ತುಜನ ಪಾಲ್ಗೊಳ್ಳುವಿಕೆಯ ಅಪರ್ವಸಂಗಮವಾಗಿದೆ. ವಿಜಯನಗರದಪರಂಪರೆಯಿಂದಮೈಸೂರು ಒಡೆಯರರಾಜವೈಭವದವರೆಗೆಮತ್ತುಅಲ್ಲಿಂದ ಇಂದಿನ ನಾಡಹಬ್ಬದ ರೂಪದವರೆಗೆದಸರಾ ಹಲವುಹಂತಗಳನ್ನು ದಾಟಿಬೆಳೆದಿದೆ.ಆದ್ದರಿಂದಲೇ ಮೈಸೂರುರಾಜ್ಯದಪ್ರವಾಸಿಗರಪ್ರಮುಖಆರ್ಷಣೆಯಕೇಂದ್ರವಾಗಿದೆ.

ಬನ್ನಿ, ಈ ರ್ಷದನಾಡ ಹಬ್ಬದಸರಾದಲ್ಲಿ ಎಲ್ಲರೂ ಪಾಲ್ಗೊಂಡು, ವೈವಿಧ್ಯಮಆಚರಣೆಗಳನ್ನು ಕಣ್ತುಂಬಿಕೊಳ್ಳೋಣ!

(ಡಾ. ಶಾಲಿನಿರಜನೀಶ್)

ಸರ್ಕಾರದ ಮುಖ್ಯಕಾರ್ಯದರ್ಶಿಗಳು



60 ದಿನಗಳನ್ನು ಪೂರೈಸಿದ ನಶಾಮುಕ್ತ ಭಾರತ ಸೈಕಲ್ ಯಾತ್ರೆ ಡಾ. ಬಿ.ಎಂ. ಪಾಟೀಲರ ಸಮಾಜ ಸೇವೆ ಶ್ಲಾಘನೀಯ

ರಾಯಚೂರು,ಆ.13-

ನಗರದ ಬಸವ ಆಸ್ಪತ್ರೆಯ ಮುಖ್ಯಸ್ಥರಾದ ಡಾ. ಬಸವರಾಜ ಎಂ. ಪಾಟೀಲರವರು ರಾಯಚೂರಿನ ರಿಮ್ಸ್ ಕಾಲೇಜಿನ ಜನರಲ್ ಮೆಡಿಸಿನ್ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇವರು ಅಗಸ್ಟ್ 15 ರಿಂದ ಇಲ್ಲಿಯವರೆಗೆ ಸೈಕಲ್ ಮೂಲಕ ತಮ್ಮ ಮನೆಯಿಂದ ನಿತ್ಯ ಸೇವೆ ಸಲ್ಲಿಸುವ ರಿಮ್ಸ್ ಆಸ್ಪತ್ರೆ, ಕಾರ್ಯಲಯಕ್ಕೆ ಕಾಲೇಜಿಗೆ ಹೋಗುವ ಪ್ರಯಾಣವನ್ನು ಬೆಳೆಸಿದರು.

ಇಂದಿಗೆ 60 ನೇ ದಿನಕ್ಕೆ ಪಾದಾರ್ಪಣೆ ಮಾಡಿದ ಡಾ. ಬಸವರಾಜ ಎಂ. ಪಾಟೀಲರವರು ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷರಾಗಿ ಜೊತೆಗೆ ವಿಶೇಷವಾಗಿ ರಾಯಚೂರು ಸೈಕಲ್ ಅಸೋಸಿಯೇಷನ್ ಪ್ರಮುಖರಾಗಿ ಜೊತೆಗೆ ಒಬ್ಬ ಪ್ರಸಿದ್ಧ ವೈದ್ಯರಾಗಿ ಡಯಾಬಿಟಿಸ್ ಕ್ಷೇತ್ರದಲ್ಲಿ ತಮ್ಮದೇ ಆದ ಉತ್ತಮ ಕಾರ್ಯವನ್ನು ನಿರ್ವಹಿಸುವ ಜೊತೆಗೆ ಲಯನ್ಸ್ ಕ್ಲಬ್ ಮತ್ತು ರೆಡ್ ಕ್ರಾಸ್ ಸಂಸ್ಥೆಯ ಸದಸ್ಯರಾಗಿ ಕ್ರಿಯಾ ಶೀಲರಾಗಿ ಕಾರ್ಯನಿರ್ವಸಿತಿರುವ ಶಕ್ತಿವಂತರು ಪರಿಸರದ ಬಗ್ಗೆ ಮತ್ತು ನಶಾ ಮುಕ್ತ ಅಂಶವನ್ನು ಇಟ್ಟುಕೊಂಡು ಅರವತ್ತು ದಿನಗಳವರೆಗೆ ತಮ್ಮ ಮನೆಯಿಂದ ರಿಮ್ಸ್ ಕಾಲೇಜಿಗೆ ಸೈಕಲನ್ನು ತೆಗೆದುಕೊಂಡು ತಮ್ಮ ದಿನನಿತ್ಯ ಕಾರ್ಯವನ್ನು ಮಾಡುತ್ತಿದ್ದಾರೆ. ಇವರ ಕಾರ್ಯಕ್ಕೆ ಈಗಾಗಲೇ ರಾಜೀವ್ ಗಾಂಧಿ ವಿಶ್ವ ವಿದ್ಯಾಲಯ ವತಿಯಿಂದ ರಾಯಭಾರಿಯಾಗಿ ಕಾರ್ಯನಿರ್ವ ಹಿಸುವಂತೆ ಜವಾಬ್ದಾರಿ ನೀಡಿರುವುದಾಗಿ ತಿಳಿದು ಬಂದಿದೆ, ಜೊತೆಗೆ ವಿಶ್ವವಿಖ್ಯಾತ ವಾದ ದಸರಾ ಕಾರ್ಯಕ್ರಮದಲ್ಲಿ ಇವರಿಗೆ ಸನ್ಮಾನಕ್ಕೆ ಆಯ್ಕೆ ಮಾಡಿದ್ದು ರಾಯಚೂರು ಜನರ ಹೆಮ್ಮೆಪಡುವ ವಿಷಯವಾಗಿದೆ, ನಶಾಮುಕ್ತ ಭಾರತದ ಪರಿಕಲ್ಪನೆ ನಶಾಮುಕ್ತ ಕರ್ನಾಟಕದ. ಕ್ರಿಯಾ ಶೀಲತೆ ಜೊತೆಗೆ ನಶಾಮುಕ್ತ ರಾಯಚೂರು ನಿರ್ಮಾಣ ಮಾಡಲು ತಮ್ಮ ಸೈಕಲ್ ಪ್ರಯಾಣ ಯಶಸ್ವಿಗೆ 60ನೇ ದಿನಕ್ಕೆ ಇಂದಿಗೆ ಸಂಪೂರ್ಣಗೊಂಡಿದ್ದು ಇವರ ಕಾರ್ಯ ಕೆಲಸಗಳು. ಯುವಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮಾದರಿಯಾಗಿವೆ.

ಇವರೊಬ್ಬ ಪ್ರಸಿದ್ಧ ಸೈಕಲ್ ಸವಾರರು ಸೈಕಲ್ ಮೂಲಕ ನೂರಾರು. ಸಾವಿರಾರು ಕಿಲೋಮೀಟರ್ ಪ್ರಯಾಣ ಮಾಡುವಂತಹ ವೈದ್ಯರಾಗಿದ್ದಾರೆ ಇವರ ಈ ಒಂದು ಕಾರ್ಯಕ್ಕೆ ಇಡೀ ರಾಯಚೂರು ಜಿಲ್ಲೆಯ ಜನತೆ ಬಹಳ ಪ್ರೋತ್ಸಾಹ ಮಾತುಗಳನ್ನ ಆಡಿದ್ದಾರೆ, ಗಾಂಧೀ ಜಯಂತಿಯ ಸಂದರ್ಭದಲ್ಲಿ ಇವರ ಕಾರ್ಯಕ್ಕೆ ಜಿಲ್ಲಾಧಿಕಾರಿಗಳು ಮಹಾನಗರ ಪಾಲಿಕೆಯ ಆಯುಕ್ತರು ಜಿಲ್ಲಾ ಪೊಲೀಸ್ ಅಧಿಕ್ಷಕರು ಸಹಾಯಕ ಆಯುಕ್ತರು ಇವರ ಸೈಕಲ್ ಮೂಲಕ ಪ್ರಯಾಣದ ಬಗ್ಗೆ ಮುಕ್ತ ಕಂಠದಿಂದ ಮಾತನಾಡಿದ್ದಾರೆ, ಇವರ ಕಾರ್ಯ ಇವರ ಉತ್ತಮ ಕೆಲಸಗಳು ಯುವಕರಿಗೆ ವಿದ್ಯಾರ್ಥಿಗಳಿಗೆ ಮಾದರಿಯಾಗಲೆಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಲಕರಾದ ಡಾ. ದಂಡಪ್ಪ ಬಿರಾದಾರ. ಹಸಿರು ನಿಶಾನೆಯನ್ನ ತೋರಿಸಿ ಅರವತ್ತನೇ ದಿನದ ಸೈಕಲ್ ಪ್ರಯಾಣದ ಶುಭ ಕಾರ್ಯಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅವರ ಹಲವಾರು ಸ್ನೇಹಿತರು, ಬಸವ ಆಸ್ಪತ್ರೆಯ ಸರ್ವ ಸಿಬ್ಬಂಧಿಗಳು ಹಿತೈಷಿಗಳು ಉಪಸ್ಥಿತರಿದ್ದರು.

ಈಶ್ವರ ದೇವಸ್ಥಾನದಲ್ಲಿ ದಶರಾ ಶ್ರೀದೇವಿ ಪುರಾಣ ಪ್ರವಚನ, ಗಣೇಶ ಕಾಲೋನಿ ಸಾಂಸ್ಕೃತಿಕ ವೈಭವದ ಸುಕ್ಷೇತ್ರ

ನಗರದ ಶ್ರೀ ಈಶ್ವರ ದೇವಸ್ಥಾನದಲ್ಲಿ ದೇವಸ್ಥಾನದ ಅಧ್ಯಕ್ಷರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಪಾಟೀಲ ಮಿರ್ಜಾಪೂರ ಹಾಗೂ ದೇವಸ್ಥಾನದ ಸೇವಾ ಸಮಿತಿಯ ಸರ್ವ ಪದಾಧಿಕಾರಿಗಳ ನೇತೃತ್ವದಲ್ಲಿ ಶರನ್ನವರಾತ್ರಿ ಪ್ರಯುಕ್ತವಾಗಿ 9 ದಿನಗಳ ಶ್ರೀದೇವಿ ಪುರಾಣ ಪ್ರವಚನ, ವಿಶೇಷ ಪೂಜೆ ಹಾಗೂ ಬಡಾವಣೆಯ ಮಹಿಳೆಯರು ಮತ್ತು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.ಪುರಾಣ ಪ್ರವಚನಕಾರರಾದ ಲಿಂಗಸಗೂರ ತಾಲೂಕಿನ ಹಿರೇನಗನೂರ ಹಿರೇಮಠದ ಪರಮೇಶ್ವರಯ್ಯ ಶಾಸ್ತ್ರಿ, ಇವರು ಶ್ರೀದೇವಿ ಪುರಾಣ ಪ್ರವಚನವನ್ನು ಪಠಣ ಮಾಡುತ್ತ ದೇವಿಯ ಪುರಾಣವೆಂದರೆ ಇದು ಮನುಕುಲದ ದೇಹದ ಪುರಾಣವಾಗಿದೆ, ದುಷ್ಟಶಕ್ತಿಗಳೆಂದರೆ ಭ್ರಷ್ಟಾಚಾರ, ದುರ್ಗುಣಗಳನ್ನೊಳಗೊಂಡು ಮನುಷ್ಯನಲ್ಲಿರುವಂತ ದುಷ್ಟ ಚಟಗಳನ್ನು ದುರ್ಬುದ್ಧಿಗಳನ್ನು ಸಂಹಾರ ಮಾಡಿ ಸನ್ಮಾರ್ಗದಲ್ಲಿ ನಡೆಸುವುದೇ ಶ್ರೀದೇವಿ ಪುರಾಣದ ಮಹತ್ವವಾಗಿದೆ, ಮನುಷ್ಯನ ಅತೀರೇಖದ ಆಲೋಚನೆ, ಅತೀ ಆಸೆ, ಆತನಲ್ಲಿರುವ ಅಹಂಕಾರ, ಮಧ ಹಾಗೂ ಕೆಟ್ಟ ಮನಸ್ಸನ್ನು ತೊಳೆದು ಒಳ್ಳೆಯ ಬದುಕಿನ ದಾರಿ ತೋರುವುದೇ ಒಂಬತ್ತು ರಾತ್ರಿಗಳ ಮಹತ್ವದ ಪುರಾಣವಾಗಿದೆ, ಯಾವ ಸ್ಥಳದಲ್ಲಿ ನಮಗೆ ಆಹ್ವಾನವಿರುವುದಿಲ್ಲವೋ ಅಲ್ಲಿಗೆ ತೆರಳಿ ಅಲ್ಲಿ ಸಿಗುವ ವ್ಯಕ್ತಿತ್ವ ಮತ್ತು ಅಪಮಾನ ಮತ್ತು ಮನುಷ್ಯನು ಅಣಿಯಾಗಬಾರದೆಂಬ ಸಾರಾಂಶವಾಗಿದೆ ಎಂದು ನುಡಿದರು. ಅನಂತರ ದೇವಸ್ಥಾನದ ಅರ್ಚಕರಾದ ವೇ.ಮೂ. ನಾಗಯ್ಯ ಸ್ವಾಮಿ ಹಂಚಿನಾಳರವರು ಪುರಾಣದ ಗ್ರಂಥಕ್ಕೆ ಮಂಗಳಾರುತಿ ಬೆಳಗಿದರು. ಅನಂತರ ಬಡಾವಣೆಯ ಮತ್ತು ಕಾಕತೀಯ ಕಾಲೋನಿಯ ಮಕ್ಕಳಿಂದ ಗಾಯನ ಮತ್ತು ನೃತ್ಯಗಳು ಜರುಗಿದವು, ಇತ್ತೀಚೆಗೆ ಬಿಡುಗಡೆಗೊಂಡ ತೆಲುಗು ಚಲನಚಿತ್ರವಾದ ಶಬರಿ ಮಲೈ ಅಯ್ಯಪ್ಪ ಸ್ವಾಮಿಯ ಕಥೆ ಆಧಾರಿತ ಇರುಮುಡಿ ತೆಲುಗು ಚಿತ್ರದ ಹಾಡಿಗೆ ಕಾಕತೀಯ ಕಾಲೋನಿಯ ಮಕ್ಕಳು ಪ್ರದರ್ಶಿಸಿದ ನೃತ್ಯವು ನೆರೆದ ಸಾರ್ವಜನಿಕರ ಮನಸ್ಸನ್ನು ಸೂರೆಗೊಂಡಿತು, ನಂತರ ಕೆಲವು ಸಂಗೀತ ಕಲಾವಿದರು ಕರೋಕೆ ಹಾಡುಗಳನ್ನು ಪ್ರಸ್ತುತ ಪಡಿಸಿದರು.ನೂರಾರು ಸದ್ಭಕ್ತರು ಶರನ್ನವರಾತ್ರಿಯ ಅಂಗವಾಗಿ ಸದ್ಭಕ್ತರು ಭಕ್ತಿ ಸೇವೆ ಸಲ್ಲಿಸಿದ ಮಹಾ ಪ್ರಸಾದವನ್ನು ಸ್ವೀಕರಿಸಿದರು, ದಿ.13 ರಂದು ಸಂಜೆ 8 ಗಂಟೆಯಿಂದ ದೇವಸ್ಥಾನದ ಆವರಣದಲ್ಲಿ ಮಹಿಳೆಯರಿಂದ ದಾಂಡಿಯಾ ನೃತ್ಯ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಸೇವಾ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ ಇಂಥ ಪುಣ್ಯಮಯ ನವರಾತ್ರಿ ಕಾರ್ಯಕ್ರಮದಲ್ಲಿ ನಗರದ ಹಾಗೂ ಸುತ್ತಮುತ್ತಲ ಗ್ರಾಮಗಳ ಸರ್ವ ಸದ್ಭಕ್ತರು ಭಾಗವಹಿಸಿ ಶ್ರೀ ಜಗನ್ಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ. ಈ ಸಂದರ್ಭದಲ್ಲಿ ಶಿವಯೋಗಿ ಪಾಟೀಲ, ಎಂ.ಎಂ. ಪಾಟೀಲ, ಉದಯ ಕುಮಾರ ಯಾಪಲದಿನ್ನಿ, ಗಿರಿಮಲ್ಲಪ್ಪಗೌಡ, ಚನ್ನಬಸವ ಇಂಜಿನಿಯರ್, ಸಂಪತ ಕುಮಾರ, ಜಿ. ಮಲ್ಲಿಕಾರ್ಜುನ, ವೀರೇಶಪ್ಪ ಕಲ್ಮಲ, ಭೀಮರೆಡ್ಡಿ ಪಾಟೀಲ, ಪರಮೇಶ್ವರ ಸಾಲಿಮಠ, ಪರಪ್ಪಗೌಡ ಕಲ್ಮಲ, ಬಸನಗೌಡ ಕಲ್ಲೂರ, ಆದೋನಿ ಬಸಂತ ಹಾಗೂ ಬಡಾವಣೆಯ ನೂರಾರು ಮಹಿಳೆಯರು, ಯುವಕ ಯುವತಿಯರು ಮಕ್ಕಳು ಉಪಸ್ಥಿತರಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR